# ಅನಂತಪಥ

ANANTHKUMAR PRATISHTHANA

ಸಂಪುಟ - 5 | ಜನವರಿ - 2025 | ಸಂಚಿಕೆ - 55

ಪುಟ 5
ಘಟಿಕೋತ್ಸವದಲ್ಲಿ
ವಂದೇಮಾತರಂ



# ವಂದೇ ಮಾತರಂ- ತಾಯಿ ಭಾರತಿ ನಿನಗೆ ವಂದಿಪೆ



ದಿ. 12-01-2000ರ ಚಿತ್ರ. ಶ್ರೀ ಅನಂತಕುಮಾರ್ ಅವರ ಜೊತೆಗೆ, ಶ್ರೀ ಅರವಿಂದ ಲಿಂಬಾವಳಿ, ಶ್ರೀಮತಿ ರಾಣಿ ಸತೀಶ್, ಪ್ರೊ. ವಿಷ್ಣುಕಾಂತ್ ಚಟಪಲ್ಲಿ ಅವರನ್ನು ಕಾಣಬಹುದು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಯ ಕಿಚ್ಚು ಹಚ್ಚಿದ್ದು "ವಂದೇ ಮಾತರಂ". ಈ ಗೀತೆಯಿಂದ ಪ್ರೇರೇಪಿತರಾಗಿ, "ವಂದೇ ಮಾತರಂ" ಘೋಷಣೆಯೊಂದಿಗೆ ಅನೇಕ ಕ್ರಾಂತಿಕಾರಿಗಳು ಗಲ್ಲಿಗೇರಿದ್ದು ಇತಿಹಾಸದಲ್ಲಿ ದಾಖಲಾಗಿದೆ. ಭಾರತೀಯರಲ್ಲಿ ದೇಶಭಕ್ತಿ ಮತ್ತು ರಾಷ್ಟ್ರೀಯ ಹೆಮ್ಮೆ ಎಂಬ ಭಾವನೆಯನ್ನು ಜಾಗೃತಗೊಳಿಸಿದ ಈ ಗೀತೆ, ಸ್ವಾತಂತ್ರ್ಯಾನಂತರವೂ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವುದರೊಂದಿಗೆ, ಮಾತೃಭೂಮಿಯನ್ನು ರಕ್ಷಿಸುವ ಕರ್ತವ್ಯವನ್ನು ನೆನಪಿಸುವ ರಾಷ್ಟ್ರೀಯ ಗೀತೆಯಾಗಿದೆ. ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರಾಗಿ ದಶಕಗಳ ಕಾಲ ಸೇವೆ ಸಲ್ಲಿಸಿದ್ದ ಅನಂತಕುಮಾರ್ ಅವರಿಗೆ, ಮೊದಲಿನಿಂದಲೇ ಅಖಂಡ 'ವಂದೇ ಮಾತರಂ' ಸ್ಫೂರ್ತಿಯ ಪಂಜಾಗಿತ್ತು. ಭಾರತದ ಸ್ವಾತಂತ್ರ್ಯ ಹೋರಾಟದ ಕ್ರಾಂತಿ ಗೀತೆಯನ್ನು ಜಾತ್ಯತೀತೆಯ ಹೆಸರಿನಲ್ಲಿ ಪೂರ್ಣವಾಗಿ ಹಾಡದೆ, ರಾಜಕೀಯ ಕಾರಣಗಳಿಂದಾಗಿ ಅದು ಕತ್ತರಿಸಲ್ಪಟ್ಟಿದ್ದು ಎಲ್ಲರಿಗೂ ತಿಳಿದ ವಿಷಯ.

ಆದರೆ, ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರದಲ್ಲಿ ಯುವಜನ ಮತ್ತು ಕ್ರೀಡಾ ಸಚಿವರಾಗಿದ್ದ ಅನಂತಕುಮಾರ್ ಈ ನಿರ್ಬಂಧವನ್ನು ಮುರಿದು, ನಮ್ಮ ಯುವಕ-ಯುವತಿಯರು ಹೊಸ ಸಹಸ್ರಮಾನವನ್ನು ಸ್ವಾಗತಿಸಲು ಅಖಂಡ 'ವಂದೇ ಮಾತರಂ' ಹಾಡುವ ಮೂಲಕ ದೇಶಕ್ಕಾಗಿ ದುಡಿಯುವ ಸಮರ್ಪಣೆಯೊಂದಿಗೆ ಈ ಮಹತ್ವದ ಕ್ಷಣವನ್ನು ಆಚರಿಸಬೇಕೆಂದು ನಿರ್ಧರಿಸಿದರು.

ದೇಶಪ್ರೇಮವನ್ನು ಉಕ್ಕಿಸುವ ವಂದೇ ಮಾತರಂ ದೇಶದೆಲ್ಲೆಡೆ ಮೊಳಗಬೇಕು ಎಂದು ಚಟುವಟಿಕೆಗಳು ಪ್ರಾರಂಭವಾದವು. ತಲಾ 100 ಯುವಕರ ತಂಡಗಳು 540 ಜಿಲ್ಲೆಗಳಲ್ಲೂ ತಯಾರಾದವು. ಈ ತಂಡಕ್ಕೆ ನ್ಯಾಷನಲ್ ರಿಕನ್ಸ್ಟ್ರಕ್ಷನ್ ಕಾರ್ಪ್ಸ್ (NRC ) ಎಂದು ಕರೆಯಲಾಯಿತು. ಈ ತಂಡವು ಅಖಂಡ ವಂದೇಮಾತರಂ ಹೇಳುವುದರ ಜೊತೆಗೆ ವರ್ಷವಿಡೀ ರಾಷ್ಟ್ರನಿರ್ಮಾಣದ ವಿವಿಧ ಸೇವಾ ಚಟುವಟಿಕೆಗಳಲ್ಲಿ ನಿರತರಾಗಿದ್ದರು.

ಪುಟ 4 ರಲ್ಲಿ ಮುಂದುವರಿದಿದೆ

# ಹೊಸ ವರ್ಷಕ್ಕೆ ಸ್ವಾಗತ- ಅನಂತ ಸೇವಾ ಉತ್ಸವ

ಅದಮ್ಯ ಚೇತನ ಸಂಸ್ಥೆಯು "ಸಂಘಟನೆ - ಸೇವೆ - ಸಂಕಲ್ಪ" ಎಂಬ ತ್ರಿವಳಿ ಧ್ಯೇಯವನ್ನಿಟ್ಟುಕೊಂಡು ಪ್ರತಿ ವರ್ಷವೂ ಹೊಸವರ್ಷವನ್ನು ಸ್ವಾಗತಿಸುವ "ಅನಂತ ಸೇವಾ ಉತ್ಸವ" ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದೆ. ಈ ವರ್ಷದ ಸೇವಾ ಉತ್ಸವದ ಕಾರ್ಯಕ್ರಮವನ್ನು ದಿನಾಂಕ 31-12-2024 ರಂದು ಬಸವನಗುಡಿಯ ನ್ಯಾಷನಲ್ ಹೈಸ್ಕೂಲಿನ ಸಭಾಂಗಣದಲ್ಲಿ ನಡೆಸಲಾಯಿತು. "ಅಸ್ಮಿತೆ- ಕ್ಷಾತ್ರತೇಜ" ಈ ವರ್ಷದ ಪ್ರಧಾನ ಉದ್ಘೋಷವಾಗಿತ್ತು.

ಪದ್ಮಶ್ರೀ ಪುರಸ್ಕೃತರಾದ ಶ್ರೀಮತಿ ಅನುಪಮಾ ಹೊಸ್ಕೆರೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿದ ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಸಂಸ್ಥೆಯ ಸಾಮಾಜಿಕ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ನಂತರ ಖ್ಯಾತ ರಂಗಕಲಾವಿದೆ, ಲೀಲಾ ಬಸವರಾಜ್ ಅವರು "ಅವ್ವರಸಿ" ಕಿರುನಾಟಕವನ್ನು ಪ್ರದರ್ಶಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳ ಭಾಗವಾಗಿ ಕೋಲಾಟ ನೃತ್ಯವೂ ಜರುಗಿತು. ಡಾ.ಪದ್ಮಿನಿ ಓಕ್ ಹಾಗೂ ಅಪರ್ಣಾ ಅವರ ತಂಡದ ದೇಶಭಕ್ತಿ ಗೀತೆಗಳ ಗಾಯನವು ಉತ್ಸವ ಕಾರ್ಯಕ್ರಮಕ್ಕೆ ಶೋಭೆ ನೀಡಿತು. ಈ ಸಂದರ್ಭದಲ್ಲಿ ಶ್ರೀಮತಿ ಅನುಪಮಾ ಹೊಸ್ಕೆರೆ ಅವರನ್ನು ಸನ್ಮಾನಿಸಲಾಯಿತು.



ಮಧ್ಯರಾತ್ರಿ 12 ಗಂಟೆಗೆ ಉತ್ತರಾದಿ ಮಠದ ವಿದ್ಯಾರ್ಥಿಗಳಿಂದ ವೇದಘೋಷದೊಂದಿಗೆ ಹೊಸವರ್ಷವನ್ನು ಸ್ವಾಗತಿಸಲಾಯಿತು. ನಂತರ ಡಾ. ಪದ್ಮಿನಿ ಓಕ್ ಅವರ ಮಾರ್ಗದರ್ಶನದಲ್ಲಿ ಅಖಂಡ ವಂದೇ ಮಾತರಂ ಗಾಯನದ ಮೂಲಕ ಹೊಸ ಕ್ಯಾಲೆಂಡರ್ ವರ್ಷ, 2025ನ್ನು ಬರಮಾಡಿಕೊಳ್ಳಲಾಯಿತು.

ಪುಟ 4 ರಲ್ಲಿ ಮುಂದುವರಿದಿದೆ




## ಅನಂತ ಸೇವಾ ಉತ್ಸವ 2025

### ಅಸ್ಮಿತೆ- ಕ್ಷಾತ್ರತೇಜ

31/12/2024 ರಂದು ಪ್ರಾರಂಭವಾದ ಅನಂತ ಸೇವಾ ಉತ್ಸವ 2025 ಕಾರ್ಯಕ್ರಮವು ಜನವರಿ 12 & 13 ರಂದು ಜಯನಗರದ ಎಂಇಎಸ್ ಮೈದಾನದಲ್ಲಿ ಮುಂದುವರಿಯಿತು.

# ಕೆಳದಿಯ ರಾಮೇಶ್ವರ



ವಿಜಯನಗರ ಸಾಮ್ರಾಜ್ಯದ ಅಳಿವಿನ ಆಘಾತಕ್ಕೊಳಗಾಗಿದ್ದ ಕನ್ನಡನಾಡಿನ ರಾಜಕೀಯ ಸ್ಥಿರತೆಯನ್ನು ಮುಂದಿನ ವರುಷಗಳಲ್ಲಿ ಕಾಪಾಡಿಕೊಳ್ಳಲು ಯಶಸ್ವಿಯಾದ ಪ್ರದೇಶಗಳಲ್ಲಿ ಕೆಳದಿಯ ನಾಯಕಪ್ರಭುಗಳ ಸಂಸ್ಥಾನ ಪ್ರಮುಖವಾದುದು. ಚೌಡಪ್ಪ ನಾಯಕ, ಶಿವಪ್ಪನಾಯಕ, ಸಂಕಣ್ಣನಾಯಕ, ಸದಾಶಿವ ನಾಯಕ, ಕೆಳದಿಯ ಚನ್ನಮ್ಮ, ವೀರಮ್ಮಾಜಿ, ವೆಂಕಟಪ್ಪ ನಾಯಕ ಮೊದಲಾದವರ ಆಳ್ವಿಕೆಯಲ್ಲಿ 250ಕ್ಕೂ ಹೆಚ್ಚು ವರ್ಷಗಳ ಕಾಲ ಸುಸ್ಥಿರ ಆಡಳಿತವನ್ನು ಕಂಡ ಕೆಳದಿ ಅಥವಾ ಇಕ್ಕೇರಿ ಪ್ರಾಂತ್ಯದ ಇತಿಹಾಸ ಕನ್ನಡನಾಡಿನ ಪ್ರಮುಖ ಅಧ್ಯಾಯಗಳಲ್ಲೊಂದು. ಈ ಗತವೈಭವಕ್ಕೆ ಸಾಕ್ಷಿಯಾಗಿ ಕೆಳದಿಯ ರಾಮೇಶ್ವರ ಹಾಗೂ ಇಕ್ಕೇರಿಯ ಅಘೋರೇಶ್ವರ ದೇವಾಲಯಗಳು ಇಂದಿಗೂ ಉಳಿದು ಬಂದಿವೆ.

ನಾಯಕದೊರೆಗಳ ಮೊದಲ ರಾಜಧಾನಿ ಕೆಳದಿ. ಶಿವಮೊಗ್ಗ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲೊಂದಾಗಿರುವ ಕೆಳದಿ ಸಾಗರ ತಾಲ್ಲೂಕಿನಲ್ಲಿದೆ. ಸಾಗರದಿಂದ ಎಂಟು ಕಿ.ಮೀ. ದೂರದಲ್ಲಿರುವ ಇಲ್ಲಿನ ಪ್ರಮುಖ ಐತಿಹಾಸಿಕ ನಿರ್ಮಾಣಗಳಲ್ಲಿ ರಾಮೇಶ್ವರ ದೇವಾಲಯವೂ ಒಂದು.





ಬೂದು ಹಸಿರು ಬಣ್ಣದ ಕಲ್ಲಿನಲ್ಲಿ ಕಟ್ಟಲಾಗಿರುವ ಈ ಗುಡಿಸಂಕೀರ್ಣದಲ್ಲಿ ರಾಮೇಶ್ವರ, ದೇವಿ ಹಾಗೂ ವೀರಭದ್ರ ದೇವಾಲಯಗಳಿವೆ. ವಿಜಯನಗರ ಶೈಲಿಗನುಸಾರವಾಗಿ ನಿರ್ಮಾಣಗೊಂಡಂತೆ ತೋರಿದರೂ ಈ ದೇವಾಲಯಗಳಲ್ಲಿ ಅನೇಕ ವೈಶಿಷ್ಟ್ಯಗಳಿರುವುದು ಗಮನಾರ್ಹ. ದೇವಿಯ ಗುಡಿ ಪ್ರತ್ಯೇಕವಾಗಿದೆ. ಉಳಿದೆರಡು ದೇಗುಲಗಳಿಗೂ ಮುಖಮಂಟಪವಿದ್ದು ಇವನ್ನು ಜೋಡಿಸುವ ಇನ್ನೊಂದು ಮಂಟಪವೂ ಇದೆ. ದೇವಾಲಯ ಕಟ್ಟಡವನ್ನು ಆವರಿಸಿದ ಹೆಂಚಿನ ಮಾಡು. ಮರದ ಬೃಹತ್ತಾದ ಕಂಬಗಳು ಸೊಗಸಾಗಿವೆ. ವೀರಭದ್ರ ಗುಡಿಯ ಒಳಛಾವಣಿಯಿಡೀ ಮರದ ಕೆತ್ತನೆಯಿಂದ ಕಂಗೊಳಿಸುತ್ತದೆ. ಬಗೆಬಗೆಯ ಚಿತ್ತಾರದ ವಿನ್ಯಾಸ, ಸೂರಿನ ಅಂಚಿನುದ್ದಕ್ಕೂ ವಿವಿಧ ದೇವತೆಗಳ ಬಿಂಬಗಳನ್ನು ಕೆತ್ತಿರುವ ಕಾಷ್ಠ ಫಲಕಗಳನ್ನು ಜೋಡಿಸಲಾಗಿದೆ. ಈ ಫಲಕಗಳಲ್ಲಿ ಗಣಪತಿ, ವೀರಭದ್ರ, ದುರ್ಗೆ ಮುಂತಾದ ದೇವತೆಗಳಲ್ಲದೆ ಯಕ್ಷರು, ಗಾಯಕರು, ನರ್ತಕರು, ವಾದ್ಯಗಾರರೂ ಕಂಡುಬರುತ್ತಾರೆ. ನಡುನಡುವೆ ಹೂಬಳ್ಳಿಗಳನ್ನು ಚಿತ್ರಿಸಲಾಗಿದೆ.

ಒಳಸೂರಿನಲ್ಲಿ ಕಾಷ್ಠಶಿಲ್ಪವನ್ನು ರೂಪಿಸಿರುವ ಅತ್ಯುತ್ತಮ ಮಾದರಿಗಳಲ್ಲಿ ಈ ದೇಗುಲವನ್ನು ಉದಾಹರಿಸಬಹುದು. ಸೂರಿನಿಂದ ಮುಂದುವರೆದು ಅಡ್ಡತೊಲೆ, ಆಧಾರ ಕಂಬಗಳಿಗೂ ಈ ಕೆತ್ತನೆಯ ಸೊಗಸು ಹರವಿಕೊಂಡಿದೆ.




ದೇಗುಲದ ಮುಂದಿನ ಧ್ವಜಸ್ತಂಭದ ಮೇಲುಗಡೆ ಕೋಷ್ಠವಿದ್ದು ಅದರಲ್ಲಿ ದೇವರಿಗೆ ಅಭಿಮುಖನಾಗಿ ನಂದಿ ಕುಳಿತಿದ್ದಾನೆ. ಕಂಬದ ಕೆಳಭಾಗದ ಭಿತ್ತಿಗಳಲ್ಲಿ ಗಣಪತಿ, ವೀರಭದ್ರ, ವೇಣುಗೋಪಾಲ ಮೊದಲಾದ ಆಕರ್ಷಕ ಶಿಲ್ಪಗಳನ್ನು ಕಾಣಬಹುದು. ಗುಡಿಯ ಮಂಟಪದ ಹೊರ ಅಂಚಿನಲ್ಲಿ ಆಧಾರವಾಗಿರುವ ಕಂಬಗಳು ವಿಜಯನಗರ ಶೈಲಿಯವು. ಕಾಲು ಮೇಲೆತ್ತಿ ನಿಂತ ಸಿಂಹಗಳು ಇಲ್ಲವೇ ಕುದುರೆ ಮೇಲೇರಿದ ಗಡ್ಡಧಾರಿ ಯೋಧರು ಈ ಕಂಬಗಳ ಮೇಲೆ ಕಂಡುಬರುತ್ತಾರೆ. ಮೇಲುಸೂರಿಗೆ ಆಧಾರವಾಗಿರುವ ಈ ಕಂಬಗಳು ಪ್ರಾಕಾರದ ಸುತ್ತುಗೋಡೆಯ ಮೇಲೆ ನಿಂತಿವೆ.

ಸುತ್ತುಗೋಡೆಯ ಹೊರಭಿತ್ತಿಯ ಮೇಲೆಲ್ಲ ಕಿರುಗೋಪುರಗಳ ವಿನ್ಯಾಸ. ನವರಂಗದ ಕಂಬಗಳ ಮೇಲೆ ವಿಜಯನಗರದ ಶೈಲಿಯಂತೆ ಅನೇಕ ಉಬ್ಬುಶಿಲ್ಪಗಳು. ಪರಿವಾರದೊಡನಿರುವ ನಾಯಕ ಅರಸ, ನಾಗದೇವತೆ, ಸುಲಭ ವಿವರಣೆಗೆ ನಿಲುಕದ ಹಲವು ಚಿತ್ರಚಿತ್ತಾರಗಳು. ಭುವನೇಶ್ವರಿಯ (ಒಳಸೂರಿನ) ಮೇಲೆ ಚಿತ್ರಿಸಿರುವ ಪೌರಾಣಿಕಪಕ್ಷಿ ಗಂಡಭೇರುಂಡದ ಚಿತ್ರಣವನ್ನು ನೀವು ನೋಡಲೇಬೇಕು. ಇದೇ ಮುಂದಿನ ಶತಮಾನಗಳಲ್ಲಿ ಮೈಸೂರು ಸಂಸ್ಥಾನ ಹಾಗೂ ನಾಡಿನ ಇತರ ಲಾಂಛನಗಳಲ್ಲಿ ಶೋಭಿಸುವುದಕ್ಕೆ ಮೂಲವಾದ ಚಿತ್ರವೆನಿಸಿದೆ. ರಾಮೇಶ್ವರ ಗುಡಿಯ ಹೊರಭಾಗದ ಗೋಡೆಯ ಮೇಲೆ ಸ್ಥಾಪಿತರಾದ ದ್ವಾರಪಾಲಕರನ್ನು ಗಮನಿಸಿ. ಒಂದೆಡೆ ದಕ್ಷಬ್ರಹ್ಮನಿದ್ದಾನೆ. ಶಿವನ ವಿಷಯದಲ್ಲಿ ಅಪರಾಧಿಯಾದ ದಕ್ಷ ದ್ವಾರಪಾಲಕನಾಗಿರುವುದೇನೋ ಸರಿಯೇ. ಇಲ್ಲಿ ಇನ್ನೊಬ್ಬ ದ್ವಾರಪಾಲಕನಾಗಿ ನಿಂತವನು ಸಾಕ್ಷಾತ್ ನರಸಿಂಹ! ವಿಷ್ಣುವಿನ ರೂಪಗಳಲ್ಲೇ ಉಗ್ರನೆನಿಸಿದ ಶಂಖಚಕ್ರಗದಾಧಾರಿ ನರಸಿಂಹನನ್ನು ಬಾಗಿಲಲ್ಲಿ ನಿಲ್ಲಿಸಿಬಿಟ್ಟಿರುವುದರಿಂದ ಶಿವಪಾರಮ್ಯವನ್ನು ಸಾರುವುದಕ್ಕೆ ಮತ್ತೇನೂ ಬೇಡವೆಂದು ದೇಗುಲದ ಶಿಲ್ಪಿ ಯೋಚಿಸಿರಬೇಕು. ಅಲ್ಲೇ ಪಕ್ಕದ ಗೋಡೆಯ ಮೇಲೆ ಗರುಡ ಹನುಮರು ಮುಷ್ಟಿ ಬಿಗಿಹಿಡಿದು ಜಗಳವಾಡುತ್ತಿರುವಂತೆ ಶಿಲ್ಪಚಿತ್ರವೊಂದನ್ನು ನಿರೂಪಿಸಿದೆ. ತಮ್ಮ ಆರಾಧ್ಯದೇವನೇ ಬಾಗಿಲು ಕಾಯುತ್ತಿರುವಾಗ ಬೇರೇನೂ ಕೆಲಸವಿಲ್ಲದೆ ಅವರೇನು ಮಾಡಿಯಾರು?

ಹೊರಗೋಡೆಗಳ ಮೇಲಿನ ಭಿತ್ತಿಚಿತ್ರಗಳಲ್ಲಿ ವಾಸ್ತುಪುರುಷನ ಶಿಲ್ಪವಿರುವುದು ಗಮನಾರ್ಹ. ಗೋಡೆಯ ಮೇಲಂಚಿನಲ್ಲಿ ವಾದ್ಯಗಾರರು, ನರ್ತಕಿಯರು, ಶಿವ, ವೀರಭದ್ರ ಮೊದಲಾದ ಕಿರುಶಿಲ್ಪಗಳಿವೆ. ಸರ್ಪರೂಪದ ರಾಹು ಚಂದ್ರನನ್ನು ನುಂಗಲು ಬರುವಂತೆ ಗ್ರಹಣವನ್ನು ಸೂಚಿಸುವ ಉಬ್ಬುಶಿಲ್ಪ ಸ್ವಾರಸ್ಯಕರವಾಗಿದೆ. ಕೆಳದಿಯ ದೇಗುಲದ ಈ ವಿಶೇಷಗಳನ್ನೆಲ್ಲ ಕಣ್ತುಂಬಿಕೊಂಡಮೇಲೆ ದೇವಾಲಯದ ಬದಿಗೇ ಇರುವ ಚಾರಿತ್ರಿಕ ವಸ್ತು ಸಂಗ್ರಹಾಲಯವನ್ನು ವೀಕ್ಷಿಸಲು ಮರೆಯದಿರಿ. ◆

**ಸೌಜನ್ಯ: ಆಕಾಶವಾಣಿ, ಮೈಸೂರು**
**ಚಿತ್ರ ಸೌಜನ್ಯ: ಎ. ಜಿ. ಲಕ್ಷ್ಮೀನಾರಾಯಣ**



## ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

ಅಧ್ಯಾಯ-30

# ಕರಪತ್ರಗಳ ಸುರಿಮಳೆ



ಹುಬ್ಬಳ್ಳಿಯ ರೂಪಂ ಚಿತ್ರಮಂದಿರ. ಪ್ರೇಕ್ಷಕರೆಲ್ಲ ಚಲನಚಿತ್ರ ನೋಡುವುದರಲ್ಲಿ ತಲ್ಲೀನರಾಗಿದ್ದಾರೆ. ಇನ್ನೇನು ಮಧ್ಯಾಂತರದ ಹೊತ್ತು ಸಮೀಪಿಸುತ್ತಿದೆಯೇನೋ. ಇದ್ದಕ್ಕಿದ್ದಂತೆ ಎಲ್ಲಿಂದಲೋ ಪುಷ್ಪವೃಷ್ಟಿ, ಅಲ್ಲ, ಪತ್ರವೃಷ್ಟಿಯಾಗತೊಡಗಿತು. ಮೇಲೆಲ್ಲೋ ಬಾಲ್ಕನಿಯ ಕಡೆಯಿಂದ ತೂರಿಬಂದ ಕಾಗದಗಳು ಕೆಳಗೆ ಕುಳಿತ ಪ್ರೇಕ್ಷಕರ ಮೇಲೆಲ್ಲ ಬಿದ್ದವು. ಅಗೋ ಮಧ್ಯಾಂತರವೂ ಆಯಿತು. ಪರದೆಯ ಚಿತ್ರ ಮರೆಯಾಗಿ ದೀಪಗಳು ಹೊತ್ತಿಕೊಂಡವು. ಕುಳಿತವರೆಲ್ಲ ತಮ್ಮ ಮೇಲೆ ಬಿದ್ದ, ಆಸುಪಾಸಿನಲ್ಲಿ ಚೆಲ್ಲಾಡಿದ ಪತ್ರಿಕೆಗಳನ್ನು ಹೆಕ್ಕಿ ಕಣ್ಣಾಡಿಸತೊಡಗಿದರು. ಅಂಗೈಯಗಲಕ್ಕಿಂತ ದೊಡ್ಡದಾಗಿದ್ದ ಆ ಕರಪತ್ರಗಳು ತುರ್ತುಪರಿಸ್ಥಿತಿಯ ಆ ದಿನಗಳಲ್ಲಿ ದೇಶದ ವಿವಿಧೆಡೆ ನಡೆಯುತ್ತಿದ್ದ ದಬ್ಬಾಳಿಕೆ, ದೌರ್ಜನ್ಯಗಳನ್ನು ಕಣ್ಣಿಗೆ ಕಟ್ಟುವ ಹಾಗೆ ವರ್ಣಿಸತೊಡಗಿದ್ದವು. ಆ ವಿವರಗಳ ಪತ್ರಗಳನ್ನು ಯಾರು, ಎಲ್ಲಿಂದ ತಂದು ತಮಗೆ ತಲುಪಿಸಿದರೆಂದು ಚಿತ್ರಮಂದಿರದಲ್ಲಿ ಕುಳಿತವರಿಗೆ ತಿಳಿಯುವಂತಿರಲಿಲ್ಲ. ಸಿನಿಮಾ ಮತ್ತೆ ಶುರುವಾಗುವುದರಲ್ಲಿತ್ತು. ಜನರು ಕರಪತ್ರಗಳನ್ನು ಆಮೇಲೆ ನಿಧಾನವಾಗಿ ಓದಲಿಕ್ಕೆಂದು ಮಡಿಸಿ ಜೇಬಿನಲ್ಲಿಟ್ಟುಕೊಂಡರು. ಇನ್ನು ಇದೆಲ್ಲ ಪೋಲೀಸರ ಕೈಗೆ ಸಿಕ್ಕು ಫಜೀತಿಯಾಗಬಾರದಲ್ಲ!

ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಪತ್ರಿಕಾ ಸ್ವಾತಂತ್ರ್ಯವಾಗಲಿ ವಿಚಾರ ಸ್ವಾತಂತ್ರ್ಯವಾಗಲಿ ಇರಲಿಲ್ಲವಷ್ಟೇ. ಆಕಾಶವಾಣಿಯಾದರೂ ಆಗ ಸರ್ಕಾರದ ಮುಖವಾಣಿ ಮಾತ್ರವಾಗಿತ್ತು. ಹೀಗಿರುವಲ್ಲಿ ಸಂಘದ ಕಾರ್ಯಕರ್ತರ ಪ್ರಾರಂಭದ ಯೋಜನೆಯೆಂದರೆ ದೇಶದ ಎಲ್ಲೆಡೆ ನಡೆಯುತ್ತಿರುವ ವಿದ್ಯಮಾನಗಳನ್ನು ಜನರಿಗೆ ತಲುಪಿಸುವುದು. ಈ ಮಾಹಿತಿಗಳನ್ನು ಪತ್ರಿಕೆಯ ರೂಪದಲ್ಲಿ ಮುದ್ರಿಸಿ ಎಲ್ಲ ಕಡೆಗಳಲ್ಲಿ ಹಂಚಬೇಕು. ಆದರೆ ಹೇಗೆ?

ಸಾರ್ವಜನಿಕ ಸ್ಥಳಗಳಲ್ಲಿರುವ ಮುದ್ರಣಾಲಯಗಳಲ್ಲಿ ಇವನ್ನೆಲ್ಲ ಮುದ್ರಿಸುವ ಹಾಗಿರಲಿಲ್ಲ. ವಿಷಯಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸುವ ಕೆಲಸವೇನೋ ನಡೆದಿತ್ತು. ಅವನ್ನೆಲ್ಲ ಕ್ರೋಡೀಕರಿಸಿ ಪೋಲೀಸ್ ಮತ್ತಿತರ ಸರ್ಕಾರಿ ಇಲಾಖೆಗಳಿಗೆ ಗೊತ್ತಾಗದ ಹಾಗೆ ಎಲ್ಲೋ ಯಾವ ಮನೆಯ ಒಳಕೋಣೆಯಲ್ಲೋ ಕಲ್ಲಚ್ಚು ಮುದ್ರಣ ಮಾಡಿ ಸುದ್ದಿಪತ್ರಿಕೆಯ ನೂರಾರು ಪ್ರತಿಗಳನ್ನು ಸಿದ್ಧಪಡಿಸುತ್ತಿದ್ದರು. ಇವನ್ನು ಹಂಚುವ ಕೆಲಸ ಅನಂತಕುಮಾರನಂಥ ವಯಸ್ಸಿನ ಹುಡುಗರಿಗೆ. ಅಂಥವರ ಚಟುವಟಿಕೆಗಳನ್ನು ಪೋಲೀಸರು ಗಂಭೀರವಾಗಿ ಪರಿಶೀಲಿಸುವ, ಪರೀಕ್ಷಿಸುವ ಗೋಜಿಗೆ ಹೋಗುತ್ತಿರಲಿಲ್ಲವಾದ್ದರಿಂದ ಈ ಹುಡುಗರು ಧೈರ್ಯವಾಗಿ ಕರಪತ್ರಗಳನ್ನು ಅಡಗಿಸಿಟ್ಟುಕೊಂಡು ಎಲ್ಲೆಡೆ ತಿರುಗಾಡುತ್ತಿದ್ದರು.

ಕೆಳ ಮಧ್ಯಮವರ್ಗದ ಈ ಹುಡುಗರು ಚಲನಚಿತ್ರ ನೋಡಲು ಬಂದಾಗಲೆಲ್ಲ ಕೆಳಗಿನ ದರ್ಜೆಯ ತಿಕೀಟುಗಳನ್ನೇ ಖರೀದಿಸುತ್ತಿದ್ದವರು. ಚಿತ್ರ ನೋಡುವುದಕ್ಕೆ ಹಣ ಹೊಂದಿಸುವುದೇ ಕಷ್ಟ. ಇನ್ನು ಬಾಲ್ಕನಿಯಲ್ಲಿ ಕುಳಿತು ಚಿತ್ರ ನೋಡಬೇಕಾದರೆ ಹೆಚ್ಚಿನ ಹಣ ಎಲ್ಲಿಂದ ತರುವುದು? ಆದರೆ, ತುರ್ತುಪರಿಸ್ಥಿತಿಯ ಆ ದಿನಗಳಲ್ಲಿ ಸಂಘದ ಹುಡುಗರು ಸದ್ದಿಲ್ಲದೆ ಬಾಲ್ಕನಿಯೇರುತ್ತಿದ್ದರು. ಸಿನಿಮಾ ನೋಡುವುದಕ್ಕಲ್ಲ, ಅಲ್ಲಿಂದ ಕೆಳಗೆ ಕರಪತ್ರಗಳನ್ನು ಎಸೆಯುವುದಕ್ಕಾಗಿ. ಚಿತ್ರಮಂದಿರದ ಕತ್ತಲೆಯಲ್ಲಿ ಕರಪತ್ರ ಯಾರು ತಂದರು, ಎಸೆದವರು ಯಾರು ಗೊತ್ತಾಗುವ ಸಂಭವವೇ ಇಲ್ಲವಷ್ಟೆ. ಕೇವಲ ಚಿತ್ರಮಂದಿರಗಳಲ್ಲಿ ಮಾತ್ರವಲ್ಲ, ಜನರು ಸೇರಬಹುದಾದ ಎಲ್ಲೆಡೆ ಮಾರುಕಟ್ಟೆಯೋ ಬಸ್ ನಿಲ್ದಾಣವೋ ಸ್ಟೇಶನ್ ರಸ್ತೆಯೋ ಹೀಗೆ ಎಲ್ಲೆಡೆ ಕರಪತ್ರಗಳನ್ನು ಎಸೆದು ಪೋಲೀಸರಿಗೆ ಕಾಣದಂತೆ ಮರೆಯಾಗುವ ಚಾಕಚಕ್ಯತೆಯನ್ನಂತೂ ಹುಡುಗರು ಸಂಪಾದಿಸಿಕೊಂಡುಬಿಟ್ಟಿದ್ದರು. ಅನಂತಕುಮಾರ, ವಿಷ್ಣುಕಾಂತ, ಅಚ್ಯುತ ಮೊದಲಾದವರು ತರಗತಿಗೆ ಹಾಜರಾಗದಿದ್ದರೂ ಕಾಲೇಜಿಗೆ ತಪ್ಪದೆ ಹೋಗುತ್ತಿದ್ದರು. ಅದೂ ತರಗತಿಗಳು ಪ್ರಾರಂಭವಾಗುವುದಕ್ಕೆ ಅರ್ಧ, ಮುಕ್ಕಾಲು ತಾಸು ಮುನ್ನವೇ. ವಿದ್ಯಾರ್ಥಿಗಳು ಬಂದು ತಲುಪುವ ಮುನ್ನ ಎಲ್ಲ ತರಗತಿಗಳ ಖಾಲಿ ಡೆಸ್ಕುಗಳ ಮೇಲೆ ಕರಪತ್ರಗಳನ್ನು ಇರಿಸಿ ಬರುತ್ತಿದ್ದರು. ಎಷ್ಟು ಸಾಧ್ಯವೋ ಅಷ್ಟು ಬೇಗನೆ ಈ ಕೆಲಸ ನಿರ್ವಹಿಸಬೇಕಿತ್ತು. ಇದು ಕಾಲೇಜಿನ ಉಪನ್ಯಾಸಕರ ಕಣ್ಣಿಗೆ ಬೀಳದಿರುತ್ತಿರಲಿಲ್ಲ. “ಕ್ಲಾಸಿಗೆ ಬಾರದಿದ್ದರೂ ಹೀಗೊಂದು ಒಳ್ಳೆಯ ಕೆಲಸ ಮಾಡುತ್ತಿದ್ದೀಯಲ್ಲ, ಸರಿ ಬಿಡು“ ಎಂದು ಸುಮ್ಮನಾಗುತ್ತಿದ್ದರು. ಭುವನೇಶ್ವರ್ ಎಂಬ ಉಪನ್ಯಾಸಕರಿಗಂತೂ ಅನಂತಕುಮಾರ್ ಪರಿಚಯವಾಗಿದ್ದೇ ಹೀಗೆ.

ಒಂದು ರೀತಿಯಲ್ಲಿ ಈ ಹೋರಾಟಗಾರ ವಿದ್ಯಾರ್ಥಿಗಳಿಗೆ ಕಾಲೇಜು ಉಪನ್ಯಾಸಕರ ಪ್ರೋತ್ಸಾಹವೂ ಇದ್ದಿತೆನ್ನಬಹುದು. ಆಗ ತರಗತಿಗಳ ಹಾಜರಾತಿಯ ಜೊತೆಗೆ ಪ್ರಾಕ್ಟಿಕಲ್ಸ್ ತರಗತಿಗಳ ಹಾಜರಿಯೂ ಕಡ್ಡಾಯವಾಗಿತ್ತು. ಅದರಲ್ಲೂ ಅಚ್ಯುತ ಲಿಮಯೆ, ವಿಷ್ಣುಕಾಂತ, ಪ್ರದೀಪ್ ಮಜುಂದಾರ್ ಮೊದಲಾದವರು ಪಿಯುಸಿಯ ಅಂತಿಮ ವರ್ಷದಲ್ಲಿದ್ದವರು. ಆಯಾ ವಿಷಯದ ಉಪನ್ಯಾಸಕರಿಗೆಲ್ಲ ತಮ್ಮ ಕೆಲವರು ವಿದ್ಯಾರ್ಥಿಗಳು ಸಂಘದ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದರ ಅರಿವಿದ್ದುದರಿಂದ ಅವರ ಗೈರುಹಾಜರಿಯ ಬಗೆಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ.

ಸಂಘದ ಕಾರ್ಯಾಲಯದ ಕಡೆಗೂ ಆಸುಪಾಸಿನ ಜಾಗಗಳಲ್ಲೂ ಆಗಾಗ ತನಿಖೆಗಾಗಿ ತಿರುಗಾಡುವ ಪೋಲೀಸರಿಗೂ ಈ ಹುಡುಗರ ಓಡಾಟ ಸಂಶಯ ಮೂಡಿಸಿರಬಹುದು. ಪೋಲೀಸರಿಗೆ ಸಾಮಾನ್ಯವಾಗಿ ಪಿ.ಜಿ. ಆರ್. ಸಿಂಧ್ಯ, ಸು. ರಾಮಣ್ಣ ಮೊದಲಾದ ಭೂಗತ ಹೋರಾಟಗಾರರ ಪತ್ತೆಮಾಡುವುದರ ಕಡೆಗೆ ಗಮನವಿತ್ತೇ ಹೊರತು ಈ ಕಾಲೇಜು ಹುಡುಗರ ಬಗೆಗೇನೂ ಅವರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಕೆಲವು ಪೋಲೀಸರು ಹುಡುಗರ ಚಲನವಲನಗಳನ್ನು ಅಲಕ್ಷಿಸಿದರೆ ಇನ್ನು ಕೆಲವರು ಅವರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ಗಮನಿಸದವರಂತೆ ಇದ್ದುಬಿಟ್ಟದ್ದೂ ಉಂಟು.

ಇನ್ನು ಕಾಲೇಜಿನ ಸಹಪಾಠಿಗಳಲ್ಲೇ ಅನೇಕರು “ಪ್ಯಾಸಿವ್ ಸಪೋರ್ಟರ್ಸ್” ಎಂದರೆ ನಿಷ್ಕ್ರಿಯ ಬೆಂಬಲಿಗರಾಗಿದ್ದರು. ಅಮೃತ್ ಓಸ್ವಾಲ್, ಜಿ.ವಿ. ಜೋಷಿ, ಅಶೋಕ್ ರಾಯ್ಕರ್ ಮೊದಲಾದವರು ಈ ಗುಂಪಿನವರು. ತರಗತಿಗೆ ಹೋಗದಿದ್ದ ಹೋರಾಟಗಾರರಿಗೆ ಅಟೆಂಡೆನ್ಸ್ ಹಾಕಿಸುವುದು, ನೋಟ್ಸ್ ಬರೆದುಕೊಡುವುದು, ಪ್ರಾಕ್ಟಿಕಲ್ ತರಗತಿಗಳಲ್ಲಿ ಗೈರುಹಾಜರಿ ಬೀಳದಂತೆ ನೋಡಿಕೊಳ್ಳುವುದು ಇವರ ಕೆಲಸ.

ಪುಟ 4 ರಲ್ಲಿ ಮುಂದುವರಿದಿದೆ

## ವಂದೇ ಮಾತರಂ- ತಾಯಿ ಭಾರತಿ ನಿನಗೆ ವಂದಿಪೆ

ಪುಟ 1 ರಿಂದ

ಈ ಅಭಿಯಾನದಲ್ಲಿ ವಿ. ಮುರಳೀಧರನ್ ದೆಹಲಿಯ ಕಾರ್ಯಕ್ರಮದ ಹೊಣೆ ಹೊತ್ತಿದ್ದರೆ, ಕರ್ನಾಟಕದಲ್ಲಿ ಶ್ರೀ ಅರವಿಂದ ಲಿಂಬಾವಳಿ ಮತ್ತು ಪ್ರೊ. ವಿಷ್ಣುಕಾಂತ್ ಅವರು ಕಾರ್ಯಕ್ರಮದ ಸಂಚಾಲಕರಾಗಿದ್ದರು. 2000 ದಿಂದ ( 31 ಡಿಸೆಂಬರ್ 1999 ಮಧ್ಯರಾತ್ರಿ) ಹೊಸ ಸಹಸ್ರಮಾನ ಕಾಲಿಡುತ್ತಿದ್ದಂತೆಯೇ ದೇಶಾದ್ಯಂತ ಸಹಸ್ರ ಸಹಸ್ರ ಕಂಠಗಳು ಅಖಂಡ ವಂದೇ ಮಾತರಂ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿದ್ದು ಅವಿಸ್ಮರಣೀಯ. ದೆಹಲಿಯ ಇಂಡಿಯಾ ಗೇಟ್ ಆವರಣದಲ್ಲಿ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ವಂದೇಮಾತರಂ ಉದ್ಘೋಷ ಮೊಳಗಿದ್ದು ರೋಮಾಂಚನಕಾರಿಯಾಗಿತ್ತು. ಜನವರಿ 12ರಂದು ದೆಹಲಿಯ ಮುಖ್ಯ ಕಾರ್ಯಕ್ರಮದಲ್ಲಿ ಪ್ರತಿ ಜಿಲ್ಲೆಯಲ್ಲಿನ ವಂದೇ ಮಾತರಂ ಯುವಪಡೆ ಒಟ್ಟಾಗಿ ಭಾಗವಹಿಸಿದರು.




2003ರ ವರೆಗೆ ವಂದೇ ಮಾತರಂ ಕಾರ್ಯಕ್ರಮವು ಇದೇ ವೈಭವದೊಡನೆ ದೆಹಲಿಯಲ್ಲೇ ಒಂದು ಮುಖ್ಯ ಕಾರ್ಯಕ್ರಮವಾಗಿ ನಡೆಯುತ್ತಾ ಇದ್ದಿತು. ಮುಂದೆ ಸರ್ಕಾರ ಬದಲಿಯಾದ ಸಂದರ್ಭದಲ್ಲಿ ಯುಪಿಎ ಸರ್ಕಾರ ಈ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗಲಿಲ್ಲ. ಆದರೆ ಈ ಕಾರ್ಯಕ್ರಮ ನಿರಂತರವಾಗಿ ಮುಂದುವರೆಯಬೇಕು ಎಂಬ ಚಿಂತನೆಯಿಂದ ಅದಮ್ಯ ಚೇತನ ಸಂಸ್ಥೆಯು ಮುಂದುವರೆಸಿಕೊಂಡು ಬಂದಿದೆ. ವಂದೇ ಮಾತರಂ ಗೀತಗಾಯನದೊಡನೆ ಪ್ರತಿ ಹೊಸ ವರುಷಕ್ಕೆ ಸಮಾಜದ ಒಳಿತಿನ ಉದ್ದೇಶವುಳ್ಳ ಒಂದು ವಿಶೇಷ ಸಂಕಲ್ಪವನ್ನು ತೆಗೆದುಕೊಳ್ಳುವ ಪರಿಪಾಠವನ್ನು ಶ್ರೀ ಅನಂತಕುಮಾರ್ ಜಾರಿಗೆ ತಂದರು. ಎರಡು ಮೂರು ದಿನದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಪ್ರದರ್ಶಿನಿಗಳು ವೇದಿಕೆಯ ಕಾರ್ಯಕ್ರಮಗಳು ನಡೆಯುತ್ತಾ ಬಂದವು. ಈ ಸೇವಾ ಉತ್ಸವ ಕಾರ್ಯಕ್ರಮಗಳಲ್ಲಿ ಆಗಿನ ರಕ್ಷಣಾ ಮಂತ್ರಿ ಮನೋಹರ್ ಪರಿಕ್ಕರ್, ಶ್ರೀ ರಾಜನಾಥ್ ಸಿಂಗ್, ಶ್ರೀಮತಿ ಸುಮಿತ್ರಾ ಮಹಾಜನ್, ಪ್ರಕಾಶ್ ಜಾವಡೇಕರ್ ಅಲ್ಲದೇ ದೇಶದ ಎರಡು ರಾಷ್ಟ್ರಪತಿಗಳು ರಾಷ್ಟ್ರಪತಿ ಪ್ರಣಬ್ ಮುಖರ್ಜಿ, ರಾಷ್ಟ್ರಪತಿ ರಾಮನಾಥ್ ಕೋವಿಂದ್ ಭಾಗವಹಿಸಿದ್ದು ವಿಶೇಷ. ಈ ಅವಿಸ್ಮರಣೀಯ ಕಾರ್ಯಕ್ರಮಗಳು ಜನರ ಮೆಚ್ಚುಗೆ ಪಡೆದವು. ಹೊಸ ವರ್ಷದ ಸ್ವಾಗತವನ್ನು ಅಖಂಡ ವಂದೇ ಮಾತರಂ ಗೀತಗಾಯನದೊಂದಿಗೆ ಬರಮಾಡಿಕೊಳ್ಳುವ ಪರಂಪರೆಯನ್ನು ಅದಮ್ಯ ಚೇತನ ಮುಂದುವರಿಸಿಕೊಂಡು ಬರುತ್ತಿದೆ.

## ಹೊಸ ವರ್ಷಕ್ಕೆ ಸ್ವಾಗತ- ಅನಂತ ಸೇವಾ ಉತ್ಸವ

ಪುಟ 1 ರಿಂದ ಈ ಶುಭ ಸಂದರ್ಭದಲ್ಲಿ ಈ ವರ್ಷದ ಸೇವಾ ಸಂಕಲ್ಪವನ್ನು ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ ವಿ ಕೃಷ್ಣ ಭಟ್ ಅವರು ಬೋಧಿಸಿದರು. ಸಂಘದ ಹಿರಿಯರಾದ ಶ್ರೀ ವಿ. ನಾಗರಾಜ್, ಶಾಸಕರಾದ ಶ್ರೀ ರವಿ ಸುಬ್ರಮಣ್ಯ, ಡಾ. ವಾಮನಾಚಾರ್ಯ, ವಿದ್ವಾನ್ ಆನೂರು ಅನಂತ ಕೃಷ್ಣ ಶರ್ಮ, ಖ್ಯಾತ ಆಹಾರತಜ್ಞೆ ಹೆಚ್. ಎಸ್. ಪ್ರೇಮಾ ಮುಂತಾದ ಅನೇಕ ಗಣ್ಯರು, ಸಾರ್ವಜನಿಕರು ಹಾಗೂ ಅದಮ್ಯ ಚೇತನದ ಕಾರ್ಯಕರ್ತರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

### ಸೇವಾಸಂಕಲ್ಪ 2025

"ಭಾರತದ ಅಸ್ಮಿತೆಯನ್ನು ಎತ್ತಿ ಹಿಡಿಯುವ, ಗೌರವಿಸುವ ಜವಾಬ್ದಾರಿಯನ್ನು ಹೊರುತ್ತೇನೆ. ಈ ಮಹಾನ್ ದೇಶದ ಗೌರವದ ರಕ್ಷಣೆಗಾಗಿ ಅಗತ್ಯವಿರುವ ಕ್ಷಾತ್ರತೇಜವನ್ನು ಜಾಗೃತಗೊಳಿಸಿಕೊಂಡು ನಮ್ಮ ಸಂಸ್ಕೃತಿ, ಸಮಾಜ, ಪರಿಸರ ರಕ್ಷಣೆಯ ಕಾರ್ಯದಲ್ಲಿ ತನು, ಮನ, ಧನ ಪೂರ್ವಕವಾಗಿ ಭಾಗವಹಿಸುತ್ತೇನೆ. ಅದಮ್ಯ ಚೇತನದ ಸ್ವಸ್ಥ ಆಹಾರ, ಹಸಿರು ಭಾನುವಾರ, ನಿತ್ಯ ಅನ್ನದಾನ, ಇತ್ಯಾದಿ ಸಮಾಜಮುಖಿ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗುವ ಪ್ರಯತ್ನದಲ್ಲಿ ಶ್ರದ್ಧೆಯಿಂದ ಪಾಲ್ಗೊಳ್ಳುತ್ತೇನೆ. ಪರಿಸರ ಸ್ನೇಹಿ ಪಾಕಶಾಲೆಯ ಸಂದೇಶವನ್ನು ಸಮುದಾಯದೆಡೆಗೆ ಕೊಂಡೊಯ್ಯುತ್ತೇನೆ."







## ಕರಪತ್ರಗಳ ಸುರಿಮಳೆ

ಪುಟ 3 ರಿಂದ ಟೆಲಿಫೋನ್ ಸಂಪರ್ಕ ವ್ಯಾಪಕವಾಗಿರದೆ ಇದ್ದ ಆ ಕಾಲದಲ್ಲಿ ಹೋರಾಟಗಾರರಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ಕೆಲಸವನ್ನೂ ಅನಂತಕುಮಾರರ ಬಳಗ ಯಶಸ್ವಿಯಾಗಿ ನಿರ್ವಹಿಸಿತು. "ಗಣಪತಿ ದೇವಸ್ಥಾನದ ಎದುರು ಕೆಂಪು ಶರ್ಟ್ ಹಾಕಿಕೊಂಡು ಒಬ್ಬರು ನಿಂತಿರುತ್ತಾರೆ. ಅವರು ನಿಮಗೆ ಒಂದು ಚೀಟಿ ಕೊಡುತ್ತಾರೆ. ಅದನ್ನು ತೆಗೆದುಕೊಂಡು ಹೋಗಿ ರೈಲ್ವೆ ಸ್ಟೇಶನ್ ಟೀ ಸ್ಟಾಲಿನಲ್ಲಿ ನಿಂತಿರುವ ಇಂಥವರೊಬ್ಬರಿಗೆ ತಲುಪಿಸಿ." - ಇದು ಇನ್ನೊಂದು ಬಗೆಯ ಸಂಪರ್ಕಮಾಧ್ಯಮದ ಕಾರ್ಯನಿರ್ವಹಣೆ.

ಇಂತಹ ಕೆಲಸಗಳಲ್ಲಿ ಎರಡು ಮೂರು ತಿಂಗಳುಗಳು ಕಳೆದವು. ಆದರೆ, ದೇಶದ ರಾಜಕೀಯ ಸಾಮಾಜಿಕ ಸ್ಥಿತಿಗತಿಗಳಲ್ಲಿ ಯಾವ ಬದಲಾವಣೆಯೂ ಆಗುವ ಲಕ್ಷಣಗಳಿರಲಿಲ್ಲ. ಅನಂತನ ಗೆಳೆಯರ ಬಳಗದ ಅಸಹನೆ ಹೆಚ್ಚಿತು. ಈವರೆಗಿನ ಚಟುವಟಿಕೆಗಳು ಇನ್ನು ಸ್ವಾರಸ್ಯ ಕಳೆದುಕೊಂಡು ಯಾಂತ್ರಿಕವಾಗಿ ಬಿಡುತ್ತವೆಯೇನೋ ಎಂದು ಭಾಸವಾಗತೊಡಗಿದವು. ಸತ್ಯಾಗ್ರಹವೋ, ಕ್ರಾಂತಿಯೋ ಏನೋ ಒಂದು ವ್ಯಾಪಕವಾಗಿ ನಡೆದ ಹೊರತು ಬಿಡುಗಡೆಯಿಲ್ಲ ಎನ್ನಿಸತೊಡಗಿತು. ಸಂಘದ ಹಿರಿಯರ ಮಾರ್ಗಸೂಚಿಯನ್ನೇ ಎಲ್ಲರೂ ನಿರೀಕ್ಷಿಸತೊಡಗಿದ್ದರು.

೧೯೭೫ ಸೆಪ್ಟೆಂಬರ್. ಆ ವೇಳೆಗೆ ತುರ್ತುಪರಿಸ್ಥಿತಿಯ ದಬ್ಬಾಳಿಕೆಯನ್ನು ಎದುರಿಸಲು ರಾಷ್ಟ್ರವ್ಯಾಪಿ ಸತ್ಯಾಗ್ರಹವೊಂದೇ ಮಾರ್ಗವೆಂದು ಸಂಘಪರಿವಾರವೂ ಉಳಿದ ಪಕ್ಷಗಳೂ ಆಲೋಚಿಸಿದ್ದವು. ಎಲ್ಲೆಡೆ ಏಕಕಾಲದಲ್ಲಿ ಈ ಸತ್ಯಾಗ್ರಹವನ್ನು ಆರಂಭಿಸಬೇಕು ಎಂಬ ಅಭಿಪ್ರಾಯ ಮೂಡಿತ್ತು. ಈ ವಿಷಯವನ್ನು ಚರ್ಚಿಸುವಾಗ ಅನಂತಕುಮಾರ್ ತನ್ನ ಗೆಳೆಯರೊಡನೆ ಗಂಭೀರವಾಗಿ, ಸ್ಪಷ್ಟಮಾತುಗಳಲ್ಲಿ ಹೇಳಿದ್ದೇನೆಂದರೆ – " ಹೀಗೆಲ್ಲ ಸತ್ಯಾಗ್ರಹ ಮಾಡಿಕೊಂಡು ಕುಳಿತರೆ ಆಗುವಂಥದ್ದೇನೂ ಇಲ್ಲ. ನಾವೆಲ್ಲ ಬಾಂಬ್ ತಯಾರು ಮಾಡಬೇಕು, ರಕ್ತ ಕ್ರಾಂತಿ ಮಾಡಬೇಕು!" ಅನಂತಕುಮಾರನಂತೆಯೇ ಉಳಿದ ಸಹಚರರೂ ಭಗತ್ ಸಿಂಗ್, ಚಂದ್ರಶೇಖರ ಆಜಾದರನ್ನು ಅನುಸರಿಸಿ ತಾವು ಮಾಡಬಹುದಾದದ್ದೇನು ಎಂಬ ಚಿಂತನೆಯಲ್ಲಿ ತೊಡಗಿದ್ದರು.

ಮುಂದಿನ ಎರಡು ತಿಂಗಳ ಕಾಲ ನಡೆದ ಸಭೆಗಳಲ್ಲೆಲ್ಲ ಅನಂತಕುಮಾರ್ ತನ್ನ ಈ ಕ್ರಾಂತಿಕಾರಕ ವಿಚಾರಗಳನ್ನೇ ಮಂಡಿಸುತ್ತ ಬಂದರು. ಅನಂತಕುಮಾರರ ಅಭಿಪ್ರಾಯಗಳನ್ನು ಆತನ ಸಮವಯಸ್ಕರು ಸಮರ್ಥಿಸಲಾಗದಿದ್ದರೂ ಅನಂತನ ವಿಚಾರಗಳಲ್ಲೂ ಮಾತಿನ ಆವೇಶದಲ್ಲೂ ಹೊಳಪು, ತೀವ್ರತೆಗಳಿರುವುದನ್ನು ಸ್ಪಷ್ಟವಾಗಿ ಗುರುತಿಸಿದ್ದರು. ಆದರೆ, ಅನಂತಕುಮಾರರ ವಿಚಾರಗಳನ್ನು ಬದಿಗಿಟ್ಟ ಹಿರಿಯರು ತಮ್ಮ ಆಂದೋಲನದ ಸ್ವರೂಪ ರಕ್ತಕ್ರಾಂತಿಯದ್ದೋ ಮತ್ತೊಂದೋ ಅಲ್ಲ ಎಂದು ಸ್ಪಷ್ಟವಾಗಿ ಹೇಳಿದರು. ಇಡಿಯ ದೇಶದಲ್ಲಿ ಒಂದೇ ಬಗೆಯ ಹೋರಾಟ. ಅದು ಸತ್ಯಾಗ್ರಹ. ಸತ್ಯಾಗ್ರಹ ಮಾಡುವುದು, ಜೈಲು ಸೇರುವುದು. ಎಲ್ಲರೂ ಒಮ್ಮೆಗೇ ಒಟ್ಟಿಗೆ ಅಲ್ಲ. ನವೆಂಬರ್ 14 ರಿಂದ ಪ್ರಾರಂಭಿಸಿ ಪ್ರತ್ಯೇಕ ಗುಂಪುಗಳಲ್ಲಿ ಈ ಸತ್ಯಾಗ್ರಹ ಆಂದೋಲನ ನಡೆಸುವುದು. ಅನಂತಕುಮಾರ, ವಿಷ್ಣುಕಾಂತ, ಅಚ್ಯುತ ಲಿಮಯೆ ಮೊದಲಾದವರ ಗುಂಪಿಗೆ ನಿಗದಿಪಡಿಸಿದ ದಿನಾಂಕ 1975ರ ಡಿಸೆಂಬರ್ 8ನೇ ತಾರೀಕು.

# ಘಟಿಕೋತ್ಸವದಲ್ಲಿ ವಂದೇಮಾತರಂ



**ಐಐಇಎಸ್‌ಟಿಯ ನಡೆದ ಘಟಿಕೋತ್ಸದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಹಾಗೂ ವಿದ್ಯಾರ್ಥಿಗಳು ವಂದೇ ಮಾತರಂ ಗೀತೆಯನ್ನು ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.**

ಶಿಬಪುರದ ಭಾರತೀಯ ಇಂಜಿನಿಯರಿಂಗ್ ವಿಜ್ಞಾನ ಹಾಗೂ ತಾಂತ್ರಿಕ ಸಂಸ್ಥೆಯ 11ನೇ ಘಟಿಕೋತ್ಸವ ಕಾರ್ಯಕ್ರಮವು 20 ಡಿಸೆಂಬರ್ 2024 ರಂದು ಐಐಇಎಸ್‌ಟಿಯ ಸಭಾಂಗಣದಲ್ಲಿ ವಿಜೃಂಭಣೆಯಿಂದ ಜರುಗಿತು. ಐಐಇಎಸ್‌ಟಿಯ ಆಡಳಿತ ಮಂಡಳಿಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಘಟಿಕೋತ್ಸವ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ಪ್ರಾಚೀನ ವೈದಿಕ ವಾಕ್ಯವಾದ "ಸಾ ವಿದ್ಯಾ ಯಾ ವಿಮುಕ್ತಯೇ" ಇದರ ಅರ್ಥ ಜ್ಞಾನವು ಮುಕ್ತಿಯನ್ನು ನೀಡುತ್ತದೆ. ಎಲ್ಲಿ ವಿದ್ಯೆ ಇದೆಯೋ ಅಲ್ಲಿ ಬಂಧನವಿಲ್ಲ, ವಿದ್ಯೆ ಕತ್ತಲಿನಿಂದ ಬೆಳಕಿನೆಡೆಗೆ ತರುತ್ತದೆ. ವಿದ್ಯೆ ಬಂಧನಗಳಿಂದ ಮುಕ್ತಗೊಳಿಸುತ್ತದೆ. ಈ ಸಮಾರಂಭದಲ್ಲಿ ಭಾಗವಹಿಸುವುದಕ್ಕೆ ನನಗೆ ಹೆಮ್ಮೆಯಾಗುತ್ತಿದೆ. ನೀವು ಕೇವಲ ಪದವೀಧರರು ಮಾತ್ರವಲ್ಲ; ಯಾವುದೇ ಹಿಂಜರಿಕೆಯಿಲ್ಲದೆ ಪ್ರಶ್ನಿಸುವ ಸೃಜನಾತ್ಮಕವಾಗಿ ಯೋಚಿಸುವ, ಹಳೆಯ ಮಾದರಿಯನ್ನು ವಿಮರ್ಶಿಸುವ, ಸಮಾಜಮುಖಿ ಯೋಜನೆಗಳನ್ನು ರೂಪಿಸಬಲ್ಲ ಮುಕ್ತ ಜ್ಞಾನದ ಅನ್ವೇಷಕರಾಗಿದ್ದೀರಿ ಎಂದು ಅಭಿನಂದಿಸಿದರು.




ವೈದಿಕ ಕಾಲದಿಂದಲೂ, ಈ ಭವ್ಯ ಭಾರತವು ಕ್ಲಿಷ್ಟ ಪ್ರಶ್ನೆಗಳನ್ನು ಕೇಳುವ ಮತ್ತು ಸತ್ಯದ ಹುಡುಕಾಟ ಮಾಡಬಲ್ಲ ಧೈರ್ಯಶಾಲಿ ಅದ್ಭುತ ಚಿಂತಕರನ್ನು ಬೆಳೆಸಿದೆ. ಆ ಎಲ್ಲಾ ಮಹಾನ್ ಚಿಂತಕರ ಧೈರ್ಯ ಮತ್ತು ಒಳನೋಟಗಳು, ಕಲಿಕೆಯು ಜೀವನಪರ್ಯಂತ ನಡೆಯುವ ಪ್ರಕ್ರಿಯೆ ಎಂದು ನಮಗೆ ಕಲಿಸುತ್ತವೆ. ಕಲಿಕೆಯು ಗುರಿಮುಟ್ಟುವ ಪ್ರಕ್ರಿಯೆಯಾಗಿರದೆ ಸದಾ ಕುತೂಹಲಿಗಳಾಗುವ, ಸದಾ ಬೆಳೆಯುವ ಮತ್ತು ಎಂದೂ ನಿಲ್ಲದ ಕಲಿಕೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿಯಾಗಿದೆ. ನಿಮ್ಮ ಕುತೂಹಲವು ನಿಮ್ಮನ್ನು ಸವಾಲು ಮಾಡಲಿ. ನಿಮ್ಮ ಈ ಸಾಧನೆಯು, ಕೇವಲ ಪಾಠಕ್ಕೆ ಸೀಮಿತವಲ್ಲ, ಇದು ಬದುಕಿನ ಅರ್ಥವತ್ತಾದ ಆರಂಭ. ನೀವು ಭವಿಷ್ಯವನ್ನು ಕಟ್ಟುವವರಾಗಿದ್ದು, ವೈಜ್ಞಾನಿಕ ಉತ್ಸಾಹ ಮತ್ತು ನಾವೀನ್ಯತೆಯ ಮೂಲಕ ಮಾನವಜಾತಿಯ ಅತಿ ದೊಡ್ಡ ಸಮಸ್ಯೆಗಳಿಗೆ ಪರಿಹಾರಗಳನ್ನು ನೀಡುವ ಸಾಮರ್ಥ್ಯ ಹೊಂದಿದ್ದೀರಾ ಎಂದರು.

"ರವೀಂದ್ರನಾಥ ಟ್ಯಾಗೋರ್ ಅವರು ಹೇಳಿದಂತೆ, 'ಮನಸ್ಸಿನಲ್ಲಿ ಭಯವಿಲ್ಲದಿದ್ದರೆ, ತಲೆ ತಗ್ಗಿಸುವ ಪ್ರಶ್ನೆಯೇ ಎದುರಾಗದು" ಈ ವಾಕ್ಯವು ನಮ್ಮೆಲ್ಲರ ವೈಯಕ್ತಿಕ ಮಂತ್ರವಾಗಲಿ. 'ಯಾಕಾಗಬಾರದು?' ಎಂದು ಕೇಳುವ ಧೈರ್ಯವು ನಮ್ಮಲ್ಲಿರಲಿ. ಹೊಸ ಅವಕಾಶಗಳು ಮತ್ತು ಸಮಸ್ಯೆಗಳಿಗಾಗಿ ಸ್ಪಂದಿಸುವ ಜಾಗ್ರತೆ ನಮ್ಮಲ್ಲಿರಲಿ. ನಮ್ಮ ಬದುಕು, ನಮ್ಮ ಆವಿಷ್ಕಾರಗಳು, ಮತ್ತು ನಮ್ಮ ಏಳಿಗೆ— ಇವೆಲ್ಲವೂ ನಮ್ಮ ಇಚ್ಛೆಗೆ ಅನುಗುಣವಾಗಿರಲಿ."



ಐಐಇಎಸ್‌ಟಿಯ ಶಿಬ್ಬುರವು ಸಮಾಜದ ಒಳಿತಿಗಾಗಿ , ಪರಿಸರ ರಕ್ಷಣೆಗಾಗಿ ಮತ್ತು "ಸರ್ವೇ ಜನಾಃ ಸುಖಿನೋ ಭವಂತು ಎಂಬ ಧ್ಯೇಯದೊಡನೆ ಶಿಕ್ಷಣದ ಕಲಿಕೆಯನ್ನು ಮುನ್ನಡೆಸುತ್ತಿದೆ. ಪ್ರತಿ ಕೆಲಸದಲ್ಲೂ ತಾಂತ್ರಿಕತೆಯ ಜೊತೆಗೆ ದೂರದೃಷ್ಟಿಯನ್ನು ಹೊಂದಿದಾಗ ಅದ್ಭುತವಾದದ್ದನ್ನು ಸಾಧಿಸಲು ಸಾಧ್ಯವಾಗುತ್ತದೆ. ನಮ್ಮ ಹಸಿರು ಕ್ಯಾಂಪಸ್ ಅದಕ್ಕೆ ಒಂದು ಉದಾಹರಣೆಯಾಗಿದೆ.

ಬಂಗಾಳ ಇಂಜನಿಯರಿಂಗ್ ಕಾಲೇಜು ತಾಂತ್ರಿಕ ಶಿಕ್ಷಣದ ದಾರಿದೀಪದಂತಿದೆ. ಬದಲಾಗುತ್ತಿರುವ ಜಾಗತಿಕ ವಲಯದಲ್ಲಿ ನಮ್ಮ ಹಳೆಯ ಭವ್ಯತೆಯೊಂದಿಗೆ ಹೊಸ ಯೋಚನೆಗಳಿಗೂ ತೆರದುಕೊಳ್ಳಬೇಕಾಗಿದೆ. ಐಐಇಎಸ್‌ಟಿಯು ಮಾನ್ಯ ಶ್ರೀ ಪ್ರಧಾನಮಂತ್ರಿಯವರ ವಿಕಸಿತ ಭಾರತ 2047ರ ದೃಷ್ಟಿಕೋನಕ್ಕೆ ಹೊಂದಿರುವಂತಹ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದೆ. ಶಿಕ್ಷಣದ ಗುಣಮಟ್ಟ, ಸಂಶೋಧನೆ, ಅತ್ಯಾಧುನಿಕ ಮೂಲ ಸೌಕರ್ಯ, ಐಐಇಎಸ್‌ಟಿ ಮತ್ತು ಉದ್ಯಮ ಕ್ಷೇತ್ರದ ನಡುವಿನ ಒಡಂಬಡಿಕೆಗಳು, ನಗರದಲ್ಲಿರುವ ಕ್ಯಾಂಪಸ್ ಅಭಿವೃದ್ಧಿ ಇವೆಲ್ಲವೂ ಸುಸ್ಥಿರ ಅಭಿವೃದ್ಧಿಗೆ ಸಾಕ್ಷಿಯಾಗಲಿವೆ. ಐಐಇಎಸ್‌ಟಿನ ತರಗತಿಗಳು, ವೆಬಿನಾರ್‌ಗಳು, ಕಾರ್ಯಾಗಾರಗಳು ಮತ್ತು ತರಬೇತಿಗಳು ನಮ್ಮ ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕರಾಗಿ ಬೆಳೆಸುವ ಜೊತೆಗೆ ಜಾಗತಿಕ ಮಟ್ಟದಲ್ಲಿ ಉದ್ಯೋಗ ಅವಕಾಶಗಳಿಗೆ ಸಿದ್ಧಗೊಳಿಸುತ್ತವೆ. ಅವರ ಉನ್ನತ ಶಿಕ್ಷಣಕ್ಕೆ ಸಹಾಯ ಮಾಡುತ್ತದೆ.



ಸ್ವಾಮಿ ವಿವೇಕಾನಂದರು ಹೇಳಿದಂತೆ, "ಶಿಕ್ಷಣವು ನಮ್ಮೊಳಗಿನ ಪರಿಪೂರ್ಣತೆಯನ್ನು ಹೊರತರುವ ಮಾಧ್ಯಮವಾಗಬೇಕು." ಡಾ. ಶ್ಯಾಮ್‌ಪ್ರಸಾದ್ ಮುಖರ್ಜಿ ಅವರು ಪ್ರತಿಭೆ ಮತ್ತು ಸಂಶೋಧನೆಯನ್ನು ಉತ್ತೇಜಿಸಿದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.ಇವು ಕೇವಲ ಮಾತುಗಳಲ್ಲ, ಭವ್ಯ ಭಾರತ ನಿರ್ಮಾಣದ ಮಹತ್ವದ ಸೂತ್ರಗಳಾಗಿವೆ. ಈ ಸೂತ್ರಗಳು ನಿಮ್ಮ ಜೀವನದ ಗುರಿಯಾಗಿರಲಿ.

ಉತ್ತಮವಾದ ಉಪಕರಣ ಮತ್ತು ಪರಿಕರಗಳನ್ನು ಕಂಡು ಹಿಡಿಯುವ ಸಾಮರ್ಥ್ಯ ತಮಗಿದೆ. ಪ್ರತಿಯೊಬ್ಬ ವ್ಯಕ್ತಿಗೂ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಮ್ಮ ಪರಿಹಾರದ ಉಪಯೋಗವಾಗಬೇಕು. ಅದರಲ್ಲೂ ಪ್ರತಿ ಮಹಿಳೆಗೂ ಸುರಕ್ಷತೆ ಗೌರವದ ಅನುಭವ ಬೇಕು. ತಾಂತ್ರಿಕತೆ ಬರಿ ಸಮರ್ಥವಾಗಿದ್ದರೆ ಸಾಲದು, ಅದು ನ್ಯಾಯೋಚಿತವಾಗಿರಬೇಕು. ಸಂಶೋಧನೆಯು ಜ್ಞಾನ ವೃದ್ಧಿಯೊಂದಿಗೆ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಸುಧಾರಣೆಗೆ ಅನುವು ಮಾಡಿಕೊಡಬೇಕು. ಅಂತಹ ಸಂಶೋಧನೆಗಳು ನಾವು ನಮ್ಮನ್ನು ಹೊಸ ದೃಷ್ಟಿಕೋನಕ್ಕೆ ತೆರೆದುಕೊಂಡಾಗ ಹೊಸ ಕಲ್ಪನೆಗಳಿಗೆ ಅನುವು ಮಾಡಿಕೊಟ್ಟಾಗ ಮಾತ್ರ ಸಾಧ್ಯವಾಗುತ್ತದೆ.



(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು) ◆

# ಅನಂತ ಸೇವಾ ಉತ್ಸವ-2025





12/01/2025 ರಂದು ಬೆಳಿಗ್ಗೆ 10 ಗಂಟೆಗೆ ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿವಿ ಕೃಷ್ಣ ಭಟ್, ಅದಮ್ಯ ಚೇತನದ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀಮತಿ ಪ್ರತಿಭಾ ಓಕ್, ಡಾ. ರಾಜೇಂದ್ರ ಹೆಗಡೆ, ಶ್ರೀ ರಾಜೇಶ್ ಅವರು ದೀಪ ಪ್ರಜ್ವಲಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಗಾರ್ಡನ್ ಸಿಟಿ ಫಾರ್ಮರ್ಸ್ ಸಂಸ್ಥೆಗಳ ವತಿಯಿಂದ ಶ್ರೀ ಉಮೇಶ್ ಅವರಿಗೆ ನಗರ ಕೃಷಿಕ ಪ್ರಶಸ್ತಿಯನ್ನು ಈ ಸಂದರ್ಭದಲ್ಲಿ ಪ್ರದಾನ ಮಾಡಲಾಯಿತು.

ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ಅದಮ್ಯ ಚೇತನ ಸಂಸ್ಥೆಯು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಹಸಿರು ಭಾನುವಾರ ಕಾರ್ಯಕ್ರಮದ ಅಂಗವಾಗಿ 472 ನೇ ಹಸಿರು ಭಾನುವಾರ ಕಾರ್ಯಕ್ರಮವನ್ನು ಮಾವು, ಸೀಬೆ ಹಾಗೂ ವಿವಿಧ ಜಾತಿಯ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಕಾರ್ಯಕರ್ತರು ಮತ್ತು ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿದರು.



ಅನಂತ ಸೇವಾ ಉತ್ಸವದ ಅಂಗವಾಗಿ ಭಗವದ್ಗೀತೆ ಶ್ಲೋಕ ಪಠಣ, ಮಕ್ಕಳಿಗಾಗಿ ಪೌರಾಣಿಕ ಕಥೆ ಹೇಳುವ ಸ್ಪರ್ಧೆ, ಸಮೂಹ ನೃತ್ಯ, ಸಮೂಹ ವಂದೇ ಮಾತರಂ, ರಸಪ್ರಶ್ನೆ, ಮುಂತಾದ ಸ್ಪರ್ಧೆಗಳನ್ನು ಆಯೋಜಿಲಾಗಿತ್ತು ಮೊದಲ ಸುತ್ತಿನ ಸ್ಪರ್ಧೆಗಳ ಕಾರ್ಯಕ್ರಮಗಳನ್ನು ಆನ್ಲೈನ್ ಮುಖಾಂತರ ನಡೆಸಲಾಗಿದ್ದು ಅಂತಿಮ ಸುತ್ತಿನ ಸ್ಪರ್ಧೆಗಳನ್ನು ನೇರವಾಗಿ ನಡೆಸಲಾಯಿತು. ಇವುಗಳ ಜೊತೆಗೆ ಸ್ಥಳದಲ್ಲಿ ಆಯೋಜಿಸಿದ್ದ ಒಂದು ನಿಮಿಷ ಕನ್ನಡ ಮಾತನಾಡುವುದು, ಕಾಳು ಗುರುತಿಸುವ ಸ್ಪರ್ಧೆ, ದೇಸಿ ಅಡಿಗೆ ಸ್ಪರ್ಧೆ, ದೇಸಿ ಆಟ , ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಲ್ಲಾ ವಯೋಮಾನದ ಮುಂತಾದ ಜನರು ಭಾಗವಹಿಸಿ ಸಂಭ್ರಮಿಸಿದರು.

**ಹಸಿರು ಜೀವನಶೈಲಿ ಪ್ರದರ್ಶನ ಮತ್ತು ಕಾರ್ಯಾಗಾರಗಳು**



ಅದಮ್ಯ ಚೇತನ ಸಂಸ್ಥೆಯು ಕಳೆದ ಹಲವಾರು ವರ್ಷಗಳಿಂದ ಶೂನ್ಯ ತ್ಯಾಜ್ಯ, ಪಳೆಯುಳಿಕೆ ರಹಿತ ಇಂಧನ, ಮರುಬಳಕೆ ಮಾಡಬಹುದಾದ ಪ್ಲೇಟ್ ಬ್ಯಾಂಕ್, ಹಸಿರು ಭಾನುವಾರ ಮುಂತಾದ ಪ್ರಕಲ್ಪಗಳ ಮೂಲಕ ಹಸಿರು ಜೀವನಶೈಲಿಯನ್ನು ಉತ್ತೇಜಿಸುತ್ತಿದೆ. ಈ ನಿಟ್ಟಿನಲ್ಲಿ, "ಗಾರ್ಡನ್ ಸಿಟಿ ಫಾರ್ಮರ್ಸ್" ಸಂಸ್ಥೆಯ ಸಹಯೋಗದೊಂದಿಗೆ 48 ನೇ "ಊಟ ಫ್ರಮ್ ತೋಟ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದರ ಅಂಗವಾಗಿ ಅನೇಕ ವಿಶೇಷ ಕಾರ್ಯಾ ಗಾರಗಳು ಯಶಸ್ವಿಯಾಗಿ ಜರುಗಿದವು. ಡಾ. ಪ್ರೇಮಾ ಅವರು ಆರೋಗ್ಯಕರ ಸಿರಿಧಾನ್ಯ ತಿಂಡಿ ತಯಾರಿಕೆ ಬಗ್ಗೆ ಮಾಹಿತಿ ನೀಡಿದರು. ಸ್ಮಿತಾ ಕಾಮತ್ ಅವರು ರಾಸಾಯನಿಕ ಮುಕ್ತ ಸಾಬೂನು ತಯಾರಿಕೆ ಕುರಿತ ಕಾರ್ಯಾಗಾರ ನಡೆಸಿದರು. ಡಾ. ರಾಜೇಂದ್ರ ಹೆಗಡೆ ಅವರು ತಾರಸಿ ತೋಟ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಡಾ. ವಾಸುಕಿ ಅವರು ಗೃಹ ಕಾಂಪೋಸ್ಟಿಂಗ್ ಮತ್ತು ಕಸ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಈ ಕಾರ್ಯಾಗಾರಗಳಲ್ಲಿ 70ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಸಾರ್ವಜನಿಕರು ಎಲ್ಲ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸಿ ಮಾರಾಟ ಮಳಿಗೆಗಳಿಂದ ಪರಿಸರ ಸ್ನೇಹಿ ವಸ್ತುಗಳನ್ನು ಖರೀದಿಸಿದರು.



ಅದಮ್ಯ ಚೇತನದ ಸೇವಾ ಚಟುವಟಿಕೆಗಳಾದ ನಿತ್ಯ ಅನ್ನದಾನ, ಹಸಿರು ಭಾನುವಾರ, ಶ್ರದ್ಧೆಯ ಶಿಲ್ಪ ಮೊದಲಾದ ಚಿತ್ರ ಪ್ರದರ್ಶಿನಿಗಳು ಜನರ ಗಮನ ಸೆಳೆದವು. ಡಾ. ಮೈತ್ರಿಯವರು ತಯಾರಿಸಿದ ಹೊಯ್ಸಳ ದೇವಸ್ಥಾನದ ಕಾಷ್ಠಶಿಲ್ಪದ ಮಾದರಿಯು ಪ್ರದರ್ಶಿನಿಯ ಪ್ರಮುಖ ಆಕರ್ಷಣೆಯಾಗಿತ್ತು. ಏಕಬಳಕೆಯ ಪ್ಲಾಸ್ಟಿಕ್ ಬಳಸದಂತೆ ಜನರಲ್ಲಿ ಅರಿವು ಮೂಡಿಸಲು, ಪ್ಲಾಸ್ಟಿಕ್ ಅಸುರರ ವೇಷ ಧರಿಸಿದ ತಂಡವು ಉತ್ಸವದಲ್ಲಿ ಪರಿಸರ ಜಾಗೃತಿಯನ್ನು ಮೂಡಿಸಿತು.

ಸಂಜೆ 6:00 ಗಂಟೆಗೆ ಅಖಂಡ ವಂದೇ ಮಾತರಂ ಗೀತೆಯನ್ನು ಸಾಮೂಹಿಕವಾಗಿ ಡಾ. ಪದ್ಮಿನಿ ಓಕ್ ಅವರ ನಿರ್ದೇಶನದಲ್ಲಿ ಹಾಡಲಾಯಿತು. ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ವೇದವ್ಯಾಸಾಚಾರ್ ಶ್ರೀಶಾನಂದರವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ಉತ್ಸವದ ಉದ್ಘೋಷ ವಾಕ್ಯವಾದ ಅಸ್ಮಿತೆ ಮತ್ತು ಕ್ಷಾತ್ರತೇಜದ ಕುರಿತು ಸ್ಫೂರ್ತಿದಾಯಕ ಉಪನ್ಯಾಸ ನೀಡಿದರು.

ಸಭಾ ಕಾರ್ಯಕ್ರಮದ ಪ್ರಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿದ ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರರು ಅದಮ್ಯ ಚೇತನದ ಚಟುವಟಿಕೆಗಳ ವಿವರಗಳನ್ನು ನೀಡಿದರು.







**“ಪ್ರತಿಯೊಂದು ಚಿಟ್ಟೆಯೂ ವಿಭಿನ್ನ ಬಣ್ಣಗಳಲ್ಲಿ ಕಾಣಿಸುತ್ತದೆ; ಒಂದು ಚಿಟ್ಟೆಯು ಇನ್ನೊಂದು ಚಿಟ್ಟೆಯನ್ನು ಹೋಲುವುದಿಲ್ಲ. ಅದು ತನ್ನದೇ ಆದ ಅಸ್ಮಿತೆಯನ್ನು ಹೊಂದಿರುತ್ತದೆ. ಒಂದು ಸಣ್ಣ ಜೀವಿಗೂ ಅಷ್ಟೊಂದು ಅಸ್ಮಿತೆ ಇರಬೇಕಾದರೆ, ಭಾರತದ ಪ್ರಜೆಗಳಾದ ನಾವು ನಮ್ಮ ದೇಶದ ಸಂಸ್ಕೃತಿಯ ಮೇಲೆ ನಡೆಯುತ್ತಿರುವ ದಾಳಿಯನ್ನು ಎದುರಿಸಿ ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸುವ ಕಾರ್ಯ ನಡೆಸಬೇಕಾಗಿದೆ. ಭಾರತದ ಅಸ್ಮಿತೆಯನ್ನು ಪುನರ್‌ಸ್ಥಾಪಿಸುವ ಅಗತ್ಯವಿದೆ ಎಂದು ನ್ಯಾಯಮೂರ್ತಿ ಶ್ರೀ ವೇದವ್ಯಾಸಾಚಾರ್ ಶ್ರೀಶಾನಂದರು ಅಭಿಪ್ರಾಯಪಟ್ಟರು.**

(ಮುಂದಿನ ಸಂಚಿಕೆಯಲ್ಲಿ ಪೂರ್ಣ ಲೇಖನವನ್ನು ಕೊಡಲಾಗುವುದು)











ಕಾರ್ಯಕ್ರಮದ ವೇದಿಕೆಯಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ, ಪ್ರೊ. ಪಿ ವಿ ಕೃಷ್ಣ ಭಟ್ಟ, ಸತ್ಯಧ್ಯಾನಾಚಾರ್ ಕಟ್ಟಿ , ಅದಮ್ಯ ಚೇತನ ಟ್ರಸ್ಟಿ, ಪ್ರದೀಪ್ ಓಕ್, ಡಿ ಆರ್ ಸುಬ್ರಮಣ್ಯಂ, ವಿಜಯಾ ವಿದ್ಯಾ ಸಂಸ್ಥೆಯ ಮುಖ್ಯಸ್ಥರಾದ ರಘುನಂದನ್, ವಿಶ್ವವಿದ್ಯಾಪೀಠದ ಮುಖ್ಯಸ್ಥರಾದ ಡಾ. ಸುಶೀಲಾ, ಜಯನಗರದ ಶಾಸಕರಾದ ಶ್ರೀ ಸಿ.ಕೆ ರಾಮಮೂರ್ತಿ, ಮಾಜಿ ಮೇಯರ್ ಕಟ್ಟೆ ಸತ್ಯ, ಮುಂತಾದ ಗಣ್ಯರ ಜೊತೆಗೆ ಅದಮ್ಯ ಚೇತನದ ಪ್ರಮುಖ ಕಾರ್ಯಕರ್ತರು ಉಪಸ್ಥಿತರಿದ್ದರು.

**13/01/2025**ರ ಎರಡನೇ ದಿನದ ಸೇವಾ ಉತ್ಸವ ಕಾರ್ಯಕ್ರಮಗಳಿಗೆ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ತೇಜಸ್ವಿನಿ ಅನಂತಕುಮಾರ್ ಅವರು ಚಾಲನೆ ನೀಡಿದರು. ಭಜನಾ ಸ್ಪರ್ಧೆಯಲ್ಲಿ ಭಾಗವಹಿಸಿದ 50 ತಂಡಗಳಲ್ಲಿ ಅಂತಿಮ ಸುತ್ತಿನ ಸ್ಪರ್ಧೆಗೆ ಆಯ್ಕೆಯಾದ 10 ಭಜನಾ ತಂಡಗಳು ತಮ್ಮ ಹಾಡುಗಳನ್ನು ಪ್ರಸ್ತುತಪಡಿಸಿದರು. ನೃತ್ಯ, ವೀಣಾವಾದನ ಮತ್ತು ವಿಶಿಷ್ಟ ಯೋಗ ನೃತ್ಯ ಪ್ರದರ್ಶನಗಳು ಉತ್ಸವದ ವಿಶೇಷ ಆಕರ್ಷಣೆಯಾಗಿದ್ದವು. ವಿವಿಧ ಪ್ರದೇಶಗಳಿಂದ ಆಗಮಿಸಿದ ಶಾಲಾ ಮಕ್ಕಳ ಕಲಾತ್ಮಕ ಪ್ರದರ್ಶನಗಳು ಎಲ್ಲರ ಮೆಚ್ಚುಗೆಯನ್ನು ಪಡೆದವು.

ಉತ್ಸವದ ಭಾಗವಾಗಿ “ಹಿಂದೂ ದೇವಾಲಯಗಳ ನಿರ್ಮಾಣ ಮತ್ತು ಸಂರಕ್ಷಣೆಯಲ್ಲಿ ರಾಣಿ ಅಹಲ್ಯಾಬಾಯಿ ಹೋಳ್ಕರ್ ಅವರ ಪಾತ್ರ” ಎಂಬ ವಿಷಯದ ಮೇಲೆ ನಡೆದ ವಿಚಾರ ಸಂಕೀರ್ಣದಲ್ಲಿ ಮಹಿಳಾ ಉದ್ಯಮಿ ಶ್ರೀಮತಿ ಪದ್ಮಾ ಶೇಷಾದ್ರಿ ಅವರು ಉಪನ್ಯಾಸ ನೀಡಿದರು.




ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಅನಂತಕುಮಾರ್ ಅವರ ಸುಂದರ ತೈಲವರ್ಣ ಚಿತ್ರವನ್ನು ರಚಿಸಿದ ಕಲಾವಿದ ಶ್ರೀ ಕೆ. ಎಸ್ ಕೃಷ್ಣಮೂರ್ತಿಯವರನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಸನ್ಮಾನಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಸ್ಪರ್ಧಾಳುಗಳಿಗೆ ಬಹುಮಾನ ವಿತರಿಸಲಾಯಿತು. ಶ್ರೀ ಪೂರ್ಣಪ್ರಜ್ಞ ಅವರ ವಂದನಾರ್ಪಣೆಯೊಂದಿಗೆ ಸಮಾರಂಭವು ಯಶಸ್ವಿಯಾಗಿ ಮುಕ್ತಾಯವಾಯಿತು.

ಎರಡೂ ದಿನದ ಕಾರ್ಯಕ್ರಮಗಳಲ್ಲಿ ಅದಮ್ಯ ಚೇತನದ ಸಿಬ್ಬಂದಿಗಳು ಮತ್ತು ಸ್ವಯಂ ಸೇವಾ ಕಾರ್ಯಕರ್ತರು ಉತ್ಸಾಹದಿಂದ ಭಾಗವಹಿಸಿದ್ದರು. ಉತ್ತರ ಕರ್ನಾಟಕದ ಆಹಾರಗಳ ಜೊತೆಗೆ ಸಿರಿಧಾನ್ಯ ಆಧಾರಿತ ಆಹಾರದ ಮಳಿಗೆಯು ಉತ್ಸವದ ಪ್ರಮುಖ ಆಕರ್ಷಣೆಯಾಗಿತ್ತು .






# ಹಮ್ಮು ಬಿಮ್ಮು ಇಲ್ಲದ ಅನಂತಕುಮಾರ್




ಶ್ರೀಯುತ ಅನಂತಕುಮಾರ್ ಅವರು ನನಗೆ ನೇರವಾಗಿ ಮಾತಾಡಲು ಸಿಕ್ಕಿದ್ದು 1983ರ ಮೈಸೂರು ಸಮ್ಮೇಳನದಲ್ಲಿ ಎನಿಸುತ್ತೆ. ಆದರೆ ನಾನು ಹೆಚ್ಚು ಮಾತನಾಡುತ್ತಿದ್ದುದು ನನಗೆ ವಿಭಾಗ ನಿಧಿ ಜವಾಬ್ದಾರಿ ಕೊಟ್ಟಾಗ. ಯಾವುದಾದರೂ ವೋಚರ್ ಗೆ ಸೈನ್ ಮಾಡಿ, ಅಂದರೆ ತಡೀರಿ, ಅಂತ ತಡ ಮಾಡುತ್ತಿದ್ದರು. ಆಗೆಲ್ಲಾ ನಾನು ಬೆನ್ನು ಬಿಡದ ಬೇತಾಳದಂತೆ ಹೋಗ್ತಾ ಬರ್ತಾ ಕೇಳಿ ಸೈನ್ ತಗೋತಿದ್ದೆ. ಹಾಗೆ ಮಾಡಿದಾಗ "ಏನ್ರೀ ನೀವು ಇಷ್ಟು ಕಾಟ ಕೊಟ್ಟು ಸಿಗ್ನೇಚರ್ ತಗೋತೀರಾ" ಅಂತಾ ಇದ್ರು. ನಂತರದಲ್ಲಿ "ಮೊದಲು ಸೈನ್ ಮಾಡ್ತೀನಪ್ಪ, ಇಲ್ಲದಿದ್ದರೆ ಇವರು ಬಿಡುವುದಿಲ್ಲ", ಅಂತ ವೋಚರ್ಗೆ ತಕ್ಷಣ ಸೈನ್ ಮಾಡ್ತಾ ಇದ್ರು. ಅವರು ಒಬ್ಬ ಸರಳ ಸ್ನೇಹಜೀವಿ. ಹಮ್ಮು ಬಿಮ್ಮು ಎಂದೂ ತೋರಿಸುತ್ತಿರಲಿಲ್ಲ.

ಸಮಯ ಸಿಕ್ಕಾಗೆಲ್ಲ ಹಾಸ್ಯ ಚಟಾಕಿ ಹಾರಿಸುತ್ತಿದ್ದರು. ಸೀರಿಯಸ್ ವಿದ್ಯಾರ್ಥಿಗಳ ಜೊತೆಗೆ ಸೀರಿಯಸ್ಸಾಗಿಯೇ ತಮಾಷೆ ಪ್ರಸಂಗ ಸೃಷ್ಟಿಸುತ್ತಿದ್ದರು. ಒಮ್ಮೆ ಒಬ್ಬ ವಿದ್ಯಾರ್ಥಿಗೆ "ನಿಮ್ಮಲ್ಲಿ ಹಿಂದಿ ಸೈಕ್ಲೋಸ್ಟೈಲ್ ಇದೆಯಾ" ಅಂತ ಕೇಳಿದರು ಆ ವಿದ್ಯಾರ್ಥಿ ವಿಚಾರಿಸಿ ಹೇಳುತ್ತೇನೆ, ಎಂದು ಎಲ್ಲಾ ಕಡೆ ವಿಚಾರಿಸಿ 'ಎಲ್ಲೂ ಇಲ್ಲ ಸಾರ್' ಅಂತ ಹೇಳಿದರು. ಆಗೆಲ್ಲ ಈಗಿನಂತೆ ಎಲ್ಲರಿಗೂ ಜೀ ಸೇರಿಸಿ ಮಾತನಾಡುವ ಅಭ್ಯಾಸವೇನೂ ಇರಲಿಲ್ಲ. ಆಮೇಲೆ ಎಲ್ಲರೂ ನಕ್ಕು ಸೈಕ್ಲೋಸ್ಟೈಲ್ ಯಾವ ಭಾಷೆಯಲ್ಲಿ ನಾವು ಕೊಟ್ಟರು ಆ ಭಾಷೆಯಲ್ಲಿ ಪ್ರಿಂಟ್ ಆಗುತ್ತದೆ, ಅದು ಝೆರಾಕ್ಸ್ ತರಹಾನೆ ಅನ್ನುವುದನ್ನು ಜ್ಞಾಪಿಸಿಕೊಂಡು ಆ ವಿದ್ಯಾರ್ಥಿಯು ಸೇರಿದಂತೆ ಎಲ್ಲರೂ ನಕ್ಕಿದ್ದೆ ನಕ್ಕಿದ್ದು. ಮೊದಲ ಬಾರಿಗೆ ಅವರು ಸಿವಿಲ್ ಏವಿಯೇಷನ್ ಮಿನಿಸ್ಟರ್ ಆದಾಗ ಅವರ ಪಾಡು ಬೇಡ.. ಎಲ್ಲಿಗೆ ಹೋದರು ಸೆಕ್ಯೂರಿಟಿ. ಯಾರನ್ನೂ ಆಡಿಕೊಂಡು ತಮಾಷೆ ಮಾಡಿಕೊಂಡು ಇರುವ ಹಾಗಿಲ್ಲ. ಆ ಸಂದರ್ಭದಲ್ಲಿ ಮೈಸೂರಿಗೆ ಬಂದಾಗ ಅದನ್ನೇ ಹೇಳಿಕೊಂಡು ಬೇಸರಿಸಿಕೊಂಡರು.



-ಶ್ರೀಮತಿ ಪೂರ್ಣಿಮಾ ರವಿಶಂಕರ್

ಅಷ್ಟು ಹಾಸ್ಯ ಪ್ರವೃತ್ತಿಯವರು ಜವಾಬ್ದಾರಿ ಹೆಚ್ಚಿದಂತೆ ಹಾಸ್ಯಕ್ಕೆ ಅವಕಾಶವೇ ಇಲ್ಲ ಅಂತ ಬೇಜಾರು ಮಾಡಿಕೊಂಡಿದ್ದರು. ಕಡೆಗೆ ಒಮ್ಮೆ ಮೈಸೂರಿನಲ್ಲಿ ಹಳೆಯ ಕಾರ್ಯಕರ್ತರೆಲ್ಲ ಸಚ್ಚಿದಾನಂದ ಆಶ್ರಮದಲ್ಲಿ ಸೇರಿದಾಗ ಸೆಕ್ಯೂರಿಟಿಗೆ ಒಂದು ಬೌಂಡರಿ ಹಾಕಿ "ಅಲ್ಲಿಂದ ನೀವು ಯಾರು ಬರುವ ಹಾಗಿಲ್ಲ" ಅಂತ ಆರ್ಡರ್ ಮಾಡಿ ಮತ್ತೊಮ್ಮೆ ಹಳೆಯ ನೆನಪುಗಳನ್ನು ಸವಿಯುತ್ತಾ ಆ ಸಭಾಂಗಣದ ಮೆಟ್ಟಿಲ ಮೇಲೆ ಕುಳಿತು ಮನಸೋ ಇಚ್ಛೆ ಎಲ್ಲರನ್ನೂ ರೇಗಿಸಿ ಖುಷಿಪಟ್ಟರು. ಇಂತಹ ಅನೇಕ ಘಟನೆಗಳು ಅವರು ನಮ್ಮೊಂದಿಗೆ ಕೆಲಸ ಮಾಡುವಾಗಿನವು ನೆನಪಾಗುತ್ತದೆ.

ಹಾಗೆಯೇ ಅವರು ಮೈಸೂರಿಗೆ ಬಿಜೆಪಿಯ ಒಂದು ಕಾರ್ಯನಿಮಿತ್ತ ಬಂದಾಗ ನಾನು ಆ ಕಾರ್ಯಕ್ರಮದಲ್ಲಿ "ವಂದೇ ಮಾತರಂ" ಹಾಡಬೇಕು ಎಂದು ಒತ್ತಾಯ ಮಾಡಿದರು. ಆಗ ನಾನು "ಈಗ ನೀವು ಕೇಳಿದರೆ ಆಗಿನ ವಂದೇ ಮಾತರಂ ಕೇಳಿದ ಹಾಗೆ ಆಗುವುದಿಲ್ಲ, ಬೇಡ" ಅಂತ ಹೇಳಿದೆ, ಆದರೂ ಬಲವಂತವಾಗಿ ಹಾಡುವಂತೆ ಹೇಳಿದರು. ಅದಕ್ಕಾಗಿ ನಾನು ಆ ಸಭಾಂಗಣಕ್ಕೆ ಹೋಗಲು ರಸ್ತೆಯ ತಿರುವಿನಿಂದ ಒಳಗೆ ಪ್ರವೇಶಿಸುತ್ತಿದ್ದೆ. ಅದೇ ಸಮಯಕ್ಕೆ ಒಳಗಿನಿಂದ ಅವರ ಕಾರು ಹೊರಗೆ ಹೋಗಲು ಬರುತ್ತಿತ್ತು, ಅಲ್ಲಿನ ಸೆಕ್ಯೂರಿಟಿ ಸೈಡ್ಗೆ ಹೋಗಿ, ಅಂತ ಎಲ್ಲರಿಗೂ ಹೇಳುತ್ತಿದ್ದರು. ನನ್ನನ್ನು ನೋಡಿದ ಅನಂತ್ ಕುಮಾರ್ ಕಾರನ್ನು ಅಲ್ಲೇ ನಿಲ್ಲಿಸಿ ವಿಂಡೋ ಇಳಿಸಿ, "ಏನ್ರೀ, ವಂದೇ ಮಾತರಂ ಹಾಡೋಣ ಅಂತ ಬಂದ್ರಾ, ಬರ್ತೀನಿ, ಇಲ್ಲೇ ಕೆಲಸ ಸ್ವಲ್ಪ ಇದೆ" ಅಂತ ಹೇಳಿ ವಂದೇ ಮಾತರಂ ಹೊತ್ತಿಗೆ ಮತ್ತೆ ಸಭಾಂಗಣಕ್ಕೆ ಬಂದರು. ಆಗ ನಾನು ಹಾಡಿದ ವಂದೇ ಮಾತರಂ ಅವರಿಗೆ ಸ್ವಲ್ಪವೂ ಹಿಡಿಸಲಿಲ್ಲ. "ನೀವು ಸ್ವಲ್ಪವೂ ಚೆನ್ನಾಗಿ ಹಾಡಲಿಲ್ಲ" ಅಂತಾನೂ ಹೇಳಿದ್ರು. "ಅದಕ್ಕೇ ನಾನು ಹೇಳಿದ್ದು ಈಗ ಮುಂಚಿನಂತೆ ನಾನು ಹಾಡುತ್ತಿಲ್ಲ" ಎಂದು ಅವರಿಗೆ ಹೇಳಿದೆ. ಹೀಗೆ ಅವರು ಮಂತ್ರಿಗಳಾದ ಮೇಲೂ ಯಾರನ್ನೇ ಆಗಲಿ ಮುಂಚಿನಂತೆ ಮಾತನಾಡಿಸುವ ಪ್ರವೃತ್ತಿ ಅವರದಾಗಿತ್ತು. ◆

## ಹಸಿರು ಭಾನುವಾರ :

ಪರಿಸರ ರಕ್ಷಣೆಯ ದೃಷ್ಟಿಯಿಂದ ಅದಮ್ಯ ಚೇತನ ಸಂಸ್ಥೆಯಿಂದ ವತಿಯಿಂದ ಹಸಿರು ಭಾನುವಾರ ಕಾರ್ಯಕ್ರಮವನ್ನು ಆಯೋಜನೆ ಮಾಡಿಕೊಂಡು ಬರಲಾಗುತ್ತಿದೆ. ಅದರಂತೆ 469, 470, 471, 472, ಮತ್ತು 473ನೇ ಭಾನುವಾರಗಳನ್ನು ಕ್ರಮವಾಗಿ, ಸುಲ್ತಾನ್ ಪೇಟೆಯ ಸರ್ಕಾರಿ ಉರ್ದು ಶಾಲೆಯ ಆವರಣ, ಬೆಂಗಳೂರಿನ ಸಪ್ತಗಿರಿ ಲೇಔಟ್, ರಾಜಾಜಿ ನಗರದ ಜಂಗಮ ಮಠದ ಸಿದ್ಧಗಂಗಾ ಪ್ರೌಢಶಾಲೆಯ ಆವರಣ, ಜಯನಗರದ ಎಂಇಎಸ್ ಮೈದಾನದ ಆವರಣ, ಬಿ ಪಿ ವಾಡಿಯಾ ರಸ್ತೆಯ ಅನಂತ ವನದ ಆವರಣದಲ್ಲಿ ನಡೆಸಲಾಗಿದ್ದು, ಬಿಎಂಎಸ್" ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು, ಮೊದಲಾದವರು ಭಾಗವಹಿಸಿದ್ದರು.





## ನಿತ್ಯ ಅನ್ನದಾನ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ |
|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ, ಬೆಂಗಳೂರು, ಮ: 2.00 ರಿಂದ 3.00 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ ಮ: 12.30 ರಿಂದ 1.30 |
| 3 | ನಗರ್ತಪೇಟೆಯ ನಗರೇಶ್ವರ ದೇವಸ್ಥಾನ ಮ: 12.30 ರಿಂದ 1.30 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು, ಬೆಂಗಳೂರು ಮ: 12.30 ರಿಂದ 1.30 |
| 5 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು ಮ: 12:30ರಿಂದ 1:30ರವರೆಗೆ |
| 6 | ಶ್ರೀ ಈಶ್ವರ ದೇವಸ್ಥಾನ, ರೈಲ್ವೆ ಸ್ಟೇಷನ್ ರಸ್ತೆ, ಹುಬ್ಬಳ್ಳಿ ಮ: 12:30ರಿಂದ 1:30ರವರೆಗೆ |
| 7 | ಬಸವೇಶ್ವರ ಆಸ್ಪತ್ರೆಯ ಸಮೀಪ, ಸೇಡಂ ರಸ್ತೆ, ಕಲಬುರ್ಗಿ ಮ: 12:30ರಿಂದ 1:30ರವರೆಗೆ |
| 8. | ಮಹಾತ್ಮ ಗಾಂಧೀಜಿ ಆಸ್ಪತ್ರೆಯ ಆವರಣ, ಜೋಧಪುರ, ರಾಜಸ್ಥಾನ. ಮ: 12:30 ರಿಂದ 2:00ವರೆಗೆ |

ನಿತ್ಯ ಅನ್ನದಾನ ಯೋಜನೆಯ ಸೇವೆಯನ್ನು ನಮ್ಮ ಎಲ್ಲಾ ಕೇಂದ್ರಗಳಲ್ಲಿಯೂ ಪ್ರತಿದಿನ 150 ರಿಂದ 250 ಜನರು ಉಪಯೋಗಿಸುತ್ತಿದ್ದಾರೆ. ಈ ಪವಿತ್ರ ಕಾರ್ಯದಲ್ಲಿ ಪ್ರಾಯೋಜಕರಾಗಲು ಮತ್ತು ಸಹಯೋಗಿಗಳಾಗಿ ಭಾಗವಹಿಸಲು ಅವಕಾಶವಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
**89046 23967**

ವ್ಯಕ್ತಿ ವಿಶೇಷ ಮಾಲಿಕೆ

# ಉಮಾಬಾಯಿ ಕುಂದಾಪುರ

- ಕೆ. ಜನಾರ್ದನ ತುಂಗ

“ನನ್ನ ಬಾಳಿಗೆ ತಿರುವು ನೀಡಿದವರು ಉಮಾಬಾಯಿ ಕುಂದಾಪುರ. ನಾನು ಇಂದಿಗೂ ಅವರ ಅನುಯಾಯಿಯಾಗಿಯೇ ಉಳಿದಿದ್ದೇನೆ” ಎಂದು ಹೇಳಿದವರು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ. ಅವರಂತೆ ಇನ್ನೂ ನೂರಾರು ಮಹಿಳೆಯರಿಗೆ ಸ್ವಾವಲಂಬನೆಯ ಮಾರ್ಗದರ್ಶನ ಮಾಡಿದವರು ಉಮಾಬಾಯಿ ಕುಂದಾಪುರ.



ಉಮಾಬಾಯಿಯ ವಿವಾಹಪೂರ್ವ ಹೆಸರು ಭವಾನಿ ಗೋಳಿಕೇರಿ; ತಂದೆ ಗೋಳಿಕೇರಿ ಕೃಷ್ಣರಾವ್, ತಾಯಿ ತುಂಗಾಬಾಯಿ. ಜನನ ಮಂಗಳೂರಿನಲ್ಲಿ ದಿನಾಂಕ ೨೫/೦೩/೧೮೯೨ರಂದು. ಹದಿಮೂರನೆಯ ವಯಸ್ಸಿಗೆ ಕುಂದಾಪುರದ ಸಂಜೀವ ರಾವ್ ಅವರನ್ನು ಉಮಾಬಾಯಿ ಎಂಬ ಹೆಸರಿನೊಂದಿಗೆ ವಿವಾಹವಾದರು. ಆದರೆ ಅವರಿಗೆ ದೀರ್ಘ ವೈವಾಹಿಕ ಜೀವನದ ಪ್ರಾಪ್ತಿ ಇರಲಿಲ್ಲ. ಪತಿ ಸಂಜೀವ ರಾವ್ ಕುಂದಾಪುರ ಅವರು ೧೯೧೭ರಲ್ಲಿ ಕ್ಷಯ ರೋಗದಿಂದ ನಿಧನರಾದಾಗ ಉಮಾಬಾಯಿಯವರಿಗೆ ಕೇವಲ ೨೫ ವರ್ಷ ವಯಸ್ಸು.

ಸಾಂಪ್ರದಾಯಿಕ ಸಾರಸ್ವತ ಬ್ರಾಹ್ಮಣ ಕುಟುಂಬದ ಹಿನ್ನೆಲೆಯಾದರೂ ಮಾವ ಆನಂದರಾಯರು ಪ್ರಗತಿಪರ ಚಿಂತನೆ ಹೊಂದಿದವರಾಗಿದ್ದರು. ಅವರ ಇಡೀ ಕುಟುಂಬ ಕುಂದಾಪುರದಿಂದ ಮುಂಬಯಿಗೆ ಸ್ಥಳಾಂತರಗೊಂಡ ಮೇಲೆ ಅವರು ಮಹಿಳೆಯರ ಸಬಲೀಕರಣಕ್ಕಾಗಿ “ಗೌಂಡ್ ದೇವಿ ಮಹಿಳಾ ಸಮಾಜ” ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ್ದರು. ಈ ಸಂಸ್ಥೆಯ ಮೂಲಕ ಉಮಾಬಾಯಿಯವರ ಸಾಮಾಜಿಕ ಕಾರ್ಯ ಪ್ರಾರಂಭವಾಯಿತು. ಪತಿಯ ನಿಧನದ ನಂತರ ಮಾವನ ಪ್ರೋತ್ಸಾಹದಿಂದ ತಮ್ಮ ೨೭ನೇ ವಯಸ್ಸಿಗೆ ಪೂನಾದ ಅಣ್ಣಾಸಾಹೇಬ್ ಕಾರ್ವೆ ಶಾಲೆಯಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸು ಮಾಡಿದರು. ಅದು ಅಂದಿನ ಕಾಲದಲ್ಲಿ ದಕ್ಷಿಣ ಕನ್ನಡದ ಮಹಿಳೆಯರ ಪಾಲಿಗೆ ಅತ್ಯಂತ ಸಾಹಸದ ಸಾಧನೆಯಾಗಿತ್ತು. ಹೀಗಾಗಿ, ಮುಂಬೈ ನಗರದ ಸಾರಸ್ವತ ಸಮಾಜದ ಮಹಿಳೆಯರು ಅವರನ್ನು ಸನ್ಮಾನಿಸುವುದರ ಜೊತೆಗೆ ಸಾರಸ್ವತ ಮಹಿಳಾ ಸಮಾಜದ ಗೌರವ ಕಾರ್ಯದರ್ಶಿಯನ್ನಾಗಿಯೂ ಆಯ್ಕೆ ಮಾಡಿದರು. ಇದರಿಂದ ಉಮಾಬಾಯಿಯವರ ಮಹಿಳಾ ಸಬಲೀಕರಣ ಚಟುವಟಿಕೆಗಳು ವಿಸ್ತಾರಗೊಂಡವು. ೧೯೨೦ರಲ್ಲಿ ತಿಲಕರು ಮುಂಬಯಿಯಲ್ಲಿ ನಿಧನರಾದರು. ಅವರ ಅಂತ್ಯಕ್ರಿಯೆಗೆ ಸಾಕ್ಷಿಯಾದ ಉಮಾಬಾಯಿ, ಆ ಸಂದರ್ಭವನ್ನು ಕಾಂಗ್ರೆಸ್ ಕಾರ್ಯಕರ್ತರು ನಿರ್ವಹಿಸಿದ ರೀತಿಯಿಂದ ಪ್ರಭಾವಿತರಾಗಿದ್ದರು. ನಂತರ ಅವರು ಕಾಂಗ್ರೆಸ್ ಕಾರ್ಯಕರ್ತೆಯಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸತೊಡಗಿದರು.

ಈ ಹೊತ್ತಿಗೆ ಆನಂದ ರಾವ್ ಕುಟುಂಬವು ಮುಂಬೈಯಿಂದ ಹುಬ್ಬಳ್ಳಿಗೆ ಸ್ಥಳಾಂತರಗೊಂಡಿತು. ಆನಂದ ರಾವ್ ಜೀವನೋಪಾಯಕ್ಕಾಗಿ ಕರ್ನಾಟಕ ಪ್ರೆಸ್ ಪ್ರಾರಂಭಿಸಿ ತಮ್ಮ ಚಟುವಟಿಕೆಗಳನ್ನು ಮುಂದುವರಿಸಲು ಉಮಾಬಾಯಿಯವರು ಭಗಿನಿ ಮಂಡಲ ಎಂಬ ಸ್ವಯಂಸೇವಾ ಸಂಸ್ಥೆಯನ್ನು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಹುಬ್ಬಳ್ಳಿಯಲ್ಲಿ ನಾ ಸು ಹರ್ಡಿಕರ್ ಹಿಂದೂಸ್ತಾನ್ ಸೇವಾದಳವನ್ನು ಪ್ರಾರಂಭಿಸಿ ಸಮಾಜಸೇವೆಯಲ್ಲಿ ನಿರತರಾಗಿದ್ದರು. ಉಮಾಬಾಯಿಯವರು ಸೇವಾದಳದ ಮಹಿಳಾ ವಿಭಾಗದ ಮುಖ್ಯಸ್ಥರಾಗಿ ತಿಲಕ್ ಕನ್ಯಾ ಶಾಲೆಯ ಉಸ್ತುವಾರಿಯನ್ನು ವಹಿಸಿಕೊಂಡರು.

೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವು ಉಮಾ ಬಾಯಿಯವರ ಜೀವನದಲ್ಲಿ ಮಹತ್ವದ ತಿರುವಿಗೆ ಕಾರಣವಾಯಿತು. ಈ ಅಧಿವೇಶನದ ಜವಾಬ್ದಾರಿಯನ್ನು ಹೊತ್ತಿದ್ದ ಹರ್ಡೀಕರರಿಗೆ ಸಹಾಯಕರಾಗಿ ಉಮಾಬಾಯಿ ರಾಜ್ಯದ ಬೇರೆಬೇರೆ ಭಾಗಗಳಿಂದ ಸುಮಾರು ೧೫೦ ಮಹಿಳೆಯರನ್ನು ಅಧಿವೇಶನಕ್ಕೆ ಕರೆದು ತಂದರು. ವಿಧವೆಯರು, ಮಡಿ ಹೆಂಗಸರೇ ಹೆಚ್ಚಾಗಿದ್ದ ಈ ಮಹಿಳೆಯರ ತಂಡವು ಮುಂದೆ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿತು.

ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಭಾಗವಹಿಸಲು ತೊಡಗಿದ ಉಮಾಬಾಯಿಯವರು ೧೯೨೭ರಲ್ಲಿ ಕಾಂಗ್ರೆಸ್ಸಿನ ಕರ್ನಾಟಕ ಘಟಕದ ಉಪಾಧ್ಯಕ್ಷರಾಗಿ ಆಯ್ಕೆಯಾದರು. ತಮ್ಮ ಚಟುವಟಿಕೆಗಳಿಂದ ಬ್ರಿಟಿಷರ ಆಗ್ರಹಕ್ಕೆ ತುತ್ತಾದ ಉಮಾಬಾಯಿಯವರನ್ನು ಬ್ರಿಟಿಷ್ ಸರಕಾರವು ೧೯೩೨ರಲ್ಲಿ ಬಂಧಿಸಿ ಯರವಾಡ ಜೈಲಿನಲ್ಲಿರಿಸಿತು. ಆಗ ಅವರ ಜೊತೆ ಶ್ರೀಮತಿ ಸರೋಜಿನಿ ನಾಯ್ಡುರಂತಹ ಘಟಾನುಘಟಿಗಳೇ ಬಂಧನಕ್ಕೆ ಒಳಗಾಗಿದ್ದರು.

ಇಷ್ಟಕ್ಕೆ ತೃಪ್ತರಾಗದ ಸರಕಾರವು ಕರ್ನಾಟಕ ಪ್ರೆಸ್ ಮೇಲೆ ನಿರ್ಬಂಧ ವಿಧಿಸಿ ಅದನ್ನು ಮುಟ್ಟುಗೋಲು ಹಾಕಿಕೊಂಡಿತು. ಇವರ ಸ್ವಯಂಸೇವಾ ಸಂಸ್ಥೆ ಭಗಿನಿ ಮಂಡಲವನ್ನು ಸಹ ಸರಕಾರ ನಿಷೇಧಿಸಿತು. ಜೈಲಿನಿಂದ ಬಿಡುಗಡೆಯಾಗಿ ಬರುವ ಹೊತ್ತಿಗೆ ಮಾವನೂ ತೀರಿಕೊಂಡಿದ್ದರು. ಇಷ್ಟಾದರೂ ಹಿಂಜರಿಯದ ಉಮಾಬಾಯಿಯವರು ಹುಬ್ಬಳ್ಳಿಯ ತಮ್ಮ ಪುಟ್ಟ ಮನೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯ ನೀಡಿದರು. ಹಾಗೆ ಅವರ ಮನೆಗೆ ಬರುತ್ತಿದ್ದ ಹೋರಾಟಗಾರರಿಗೆ ಮರುಪ್ರಯಾಣದ ವೆಚ್ಚವನ್ನು ನೀಡಿದ ಸಂದರ್ಭಗಳೂ ಅನೇಕ.

೧೯೪೨ರ ಚಲೇಜಾವ್ ಚಳುವಳಿ ಅವರ ಜೀವನದಲ್ಲಿ ಮರೆಯಲಾಗದ ಸಂದರ್ಭ. ಹೊತ್ತಲ್ಲದ ಹೊತ್ತಿನಲ್ಲಿ ಅವರ ಮನೆಗೆ ಚಳವಳಿಗಾರರ ಒಂದು ದೊಡ್ಡ ತಂಡ ಹಸಿದು ಬಂದಿತ್ತು. ಉಮಾಬಾಯಿ ನಿರ್ಭೀತಿಯಿಂದ ಅವರೆಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದಲ್ಲದೆ ಅವರ ಹೋರಾಟಗಳಿಗೆ ಅಗತ್ಯವಿದ್ದ ಹಣವನ್ನು ಸಹ ಸಂಗ್ರಹಿಸಿ ಕೊಟ್ಟರು.

೧೯೩೪ರಲ್ಲಿ ಬಿಹಾರವು ಭೀಕರ ಭೂಕಂಪಕ್ಕೆ ಸಿಲುಕಿ ನಲುಗಿದಾಗ ತಮ್ಮ ತಂಡದೊಂದಿಗೆ ಬಿಹಾರಕ್ಕೆ ತೆರಳಿ ಅಲ್ಲಿನ ನಿರಾಶ್ರಿತರ ಶಿಬಿರಗಳಲ್ಲಿ ಅವರು ಕೆಲಸ ಮಾಡಿದರು. ಆ ಸಂದರ್ಭದಲ್ಲಿ ಅವರಿಗೆ ಬಾಬು ರಾಜೇಂದ್ರ ಪ್ರಸಾದ್ ಮತ್ತು ಆಚಾರ್ಯ ಕೃಪಲಾನಿಯಂತಹ ಮಹಾಮಹಿಮರ ಸಂಪರ್ಕವೂ ದೊರೆಯಿತು. ೧೯೩೮ರಲ್ಲಿ ಬಾಂಬೇ ಪ್ರಾಂತೀಯ ವಯಸ್ಕರ ಶಿಕ್ಷಣ ಮಂಡಳಿಯ ಮಹಿಳಾ ಪ್ರತಿನಿಧಿಯಾಗಿ ಆಯ್ಕೆಯಾದ ಉಮಾಬಾಯಿ, ಪ್ರಸಿದ್ಧ ಸಮಾಜ ಸೇವಕ ಆರ್ ಎಸ್ ಭಾಗವತರ ಜೊತೆ ಕರ್ನಾಟಕ, ಮಹಾರಾಷ್ಟ್ರ ಗುಜರಾತ್ ರಾಜ್ಯಗಳಲ್ಲಿ ಪ್ರವಾಸ ಮಾಡಿ ಆ ರಾಜ್ಯಗಳ ನಗರ ಹಾಗೂ ಗ್ರಾಮೀಣ ಮಹಿಳೆಯರ ಸ್ಥಿತಿಗತಿಗಳನ್ನು ಅಧ್ಯಯನ ನಡೆಸಿದರು.

೧೯೨೪ರ ಬೆಳಗಾವಿ ಅಧಿವೇಶನದಲ್ಲಿಯೇ ತಮ್ಮ ಗಮನ ಸೆಳೆದಿದ್ದ ಉಮಾಬಾಯಿಯವರನ್ನು ಗಾಂಧೀಜಿ ೧೯೪೬ರಲ್ಲಿ ತಾವು ಸ್ಥಾಪಿಸಿದ ಕಸ್ತೂರ್ಬಾ ಟ್ರಸ್ಟಿನ ಕರ್ನಾಟಕ ಶಾಖೆಯ ಮುಖ್ಯಸ್ಥರನ್ನಾಗಿ ನಿಯಮಿಸಿದರು. ಮಕ್ಕಳ ಯೋಗ ಕ್ಷೇಮ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಗ್ರಾಮ ಸೇವಕಿಯರ ತರಬೇತಿಯಲ್ಲಿ ನಿರತರಾಗಿ ಟ್ರಸ್ಟಿನ ಚಟುವಟಿಕೆಗಳಿಗೆ ಅಗತ್ಯವಿದ್ದ ಸಂಪನ್ಮೂಲವನ್ನೂ ಸಂಗ್ರಹಿಸಿದರು.

ಈ ರೀತಿಯಾಗಿ ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೂ ಸ್ವಾತಂತ್ರ್ಯಾನಂತರದ ವ್ಯವಸ್ಥೆಯಲ್ಲಿ ಅವರು ಯಾವ ಸ್ಥಾನಮಾನವನ್ನೂ ಬಯಸಲಿಲ್ಲ. ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುವ ತಾಮ್ರ ಪತ್ರ ಮತ್ತು ಪೆನ್ಶನ್ ಸೌಲಭ್ಯವೂ ಸೇರಿದಂತೆ ಎಲ್ಲ ಗೌರವ, ಸನ್ಮಾನಗಳನ್ನು ಅವರು ನಯವಾಗಿಯೇ ತಿರಸ್ಕರಿಸಿದರು.

ಈ ಮೊದಲು ತಾವು ಸ್ಥಾಪಿಸಿದ್ದ ಭಗಿನಿ ಮಂಡಲದ ಮೂಲಕ ಹುಬ್ಬಳ್ಳಿಯಲ್ಲಿ ಮಹಿಳಾ ಸಬಲೀಕರಣ ಮುಂತಾದ ಸಮಾಜಹಿತದ ಕಾರ್ಯಗಳಲ್ಲಿ ನಿರತರಾದರು. ೧೯೬೯-೭೦ರಲ್ಲಿ ಹುಬ್ಬಳ್ಳಿಯ ಹೋಟೆಲುಗಳಲ್ಲಿ ಕ್ಯಾಬರೆ ಪ್ರದರ್ಶನಗಳನ್ನು ವಿರೋಧಿಸಿ ಇವರು ನಡೆಸಿದ ಹೋರಾಟ ಗಮನಾರ್ಹವಾದುದು. ಇದೇ ಹೋರಾಟದಲ್ಲಿ ಕರ್ನಾಟಕದ ಹಿರಿಯ ರಾಜಕಾರಣಿ, ಕೇಂದ್ರಮಂತ್ರಿ, ಅನಂತಕುಮಾರರ ತಾಯಿ ಶ್ರೀಮತಿ ಗಿರಿಜಾ ಶಾಸ್ತ್ರಿಯವರು ೯೦೦ಕ್ಕೂ ಹೆಚ್ಚು ಮಹಿಳೆಯರನ್ನು ತಮ್ಮ ದೇವಿ ಗ್ರೂಪಿನ ಮೂಲಕ ಸಂಘಟಿಸಿ ಉಮಾಬಾಯಿಯವರ ಜೊತೆ ಕೈಜೋಡಿಸಿದ್ದರು ಎಂಬುದೂ ಮರೆಯಲಾಗದ ವಿಷಯ.

ಬಾಲ್ಯ ವಿವಾಹ, ಅಕಾಲ ವೈಧವ್ಯ, ಸಾಮಾಜಿಕ ಕಟ್ಟುಪಾಡುಗಳ ಸಂಕಷ್ಟಗಳನ್ನು ಮೆಟ್ಟಿನಿಂತು ಸ್ವಾತಂತ್ರ್ಯಹೋರಾಟದಲ್ಲಿಯೂ ಸಾಮಾಜಿಕ ಚಳುವಳಿಗಳಲ್ಲಿಯೂ ಅಹರ್ನಿಶಿ ತೊಡಗಿಕೊಂಡ ಉಮಾಬಾಯಿಯವರು ತಮ್ಮ ನೂರು ವರ್ಷಗಳ ತುಂಬು ಬಾಳಿನ ಒಂದೊಂದು ಕ್ಷಣವನ್ನೂ ಸಮಾಜಹಿತಕ್ಕಾಗಿ ಮುಡುಪಿಟ್ಟು ೧೯೯೨ರಲ್ಲಿ ನಿಧನರಾದರು.

◆

# ಗ್ರಾಮೀಣ ಭಾಗದ ಪುರುಷರಿಗೆ ನೇತೃತ್ವ ವಿಕಸನ ಶಿಬಿರ :




ಅನಂತಕುಮಾರ್ ಪ್ರತಿಷ್ಠಾನವು ಅದಮ್ಯ ಚೇತನ ಸಂಸ್ಥೆಯ ಸಹಯೋಗದಲ್ಲಿ ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ಗ್ರಾಮ ಪಂಚಾಯತಿ ಸದಸ್ಯೆಯರು ಹಾಗೂ ಗ್ರಾಮೀಣ ಭಾಗದ ಮಹಿಳೆಯರಿಗಾಗಿ ನೇತೃತ್ವ ವಿಕಸನಕ್ಕಾಗಿ "ಗ್ರಾಮ ಚೇತನ" ಎಂಬ ಶಿಬಿರವನ್ನು ಪ್ರತಿ ತಿಂಗಳು ಏರ್ಪಡಿಸುತ್ತಾ ಬಂದಿದೆ. ಆದರೆ, ಇದೇ ಮೊದಲ ಬಾರಿಗೆ ಈ ಗ್ರಾಮ ಚೇತನ ಕಾರ್ಯಕ್ರಮವನ್ನು ಗ್ರಾಮೀಣ ಭಾಗದ ಪುರುಷರಿಗಾಗಿ ದಿನಾಂಕ 07-01-2024 ರಂದು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಜೀರಗಿವಾಡ, ಕುಮಾರಕೊಪ್ಪ, ತಡಹಾಳ, ತಿರ್ಲಾಪುರ್ ಹಾಗೂ ಹೆಬ್ಬಳ್ಳಿ ಗ್ರಾಮದ 19 ಗ್ರಾಮೀಣ ಭಾಗದ ಪುರುಷ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ನೇತೃತ್ವ ಶಿಬಿರದಿಂದ ತಮಗೆ ಉಪಯುಕ್ತವಾದ ಮಾಹಿತಿ ದೊರೆತಿದೆ ಎಂದು ಶಿಬಿರಾರ್ಥಿಗಳು ಪ್ರಶಂಸೆ ವ್ಯಕ್ತಪಡಿಸಿದರು. ಜೊತೆಗೆ, ತಮ್ಮತಮ್ಮ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಈ ಚಿಂತನೆಗಳನ್ನು ಅಳವಡಿಕೊಳ್ಳುತ್ತೇವೆಂದು ಸಂಕಲ್ಪ ಮಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ಎಲ್ಲ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಈ ಯೋಜನೆಯ ಸಂಚಾಲಕರಾದ ವೀಣಾ ಅಠವಲೆ, ಶ್ರೀ ಸ್ವಾತಿ ಪಟ್ಟೇದ್, ಶ್ರೀ ಲಕ್ಷಣ್ ರಾವ್ ಓಕ್ ಮೊದಲಾದವರು ಉಪಸ್ಥಿತರಿದ್ದರು.



ಅದಮ್ಯ ಚೇತನದ ಅನ್ನಪೂರ್ಣ ಅಡುಗೆ ಮನೆಯ ಭೋಜನ ತಯಾರಿಕೆಯ ಕಾರ್ಯದಲ್ಲಿ ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳ ಉತ್ಸಾಹದಿಂದ ಭಾಗಿಯಾಗುತ್ತಿದ್ದಾರೆ.

## ತಿಂಗಳ ವರದಿ
### (15 ಡಿಸೆಂಬರ್ - 15 ಜನವರಿ) 2025)

**ಪ್ಲೇಟ್ ಬ್ಯಾಂಕ್ ಯೋಜನೆ** ಅದಮ್ಯ ಚೇತನವು ಪರಿಸರದ ಒಳಿತಿಗಾಗಿ ಪ್ಲೇಟ್ ಬ್ಯಾಂಕ್ ವ್ಯವಸ್ಥೆಯನ್ನು ನಡೆಸಿಕೊಂಡು ಬರುತ್ತಿದೆ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಸಂಘ-ಸಂಸ್ಥೆಗಳು, ಮಠಗಳು, ಶಾಲಾಕಾಲೇಜುಗಳು ತಮ್ಮ ಕಾರ್ಯಕ್ರಮಗಳಿಗೆ ಇಲ್ಲಿನ ಪ್ಲೇಟ್ ಬ್ಯಾಂಕ್ ಸೌಲಭ್ಯಗಳನ್ನು ಪಡೆಯುತ್ತಿವೆ.. ಅದರಂತೆ ಯುತ್ ಫಾರ್ ಸೇವಾ ಸಂಸ್ಥೆಯು ದಿ. 14-12-2024 ರಂದು "ಚಿಗುರು" ಕಾರ್ಯಕ್ರಮಕ್ಕೆ ಸುಮಾರು 8000 ಕ್ಕೂ ಹೆಚ್ಚು ಸ್ಟೀಲ್ ಪ್ಲೇಟ್ ಗಳನ್ನು ಬಳಸಿಕೊಂಡಿತ್ತು. ಈ ಯೋಜನೆಯನ್ನು ಬಳಸಿಕೊಂಡ ಯುತ್ ಫಾರ್ ಸೇವಾ ಸಂಸ್ಥೆಯ ಕಾರ್ಯಕರ್ತರು ತ್ಯಾಜ್ಯಮುಕ್ತವಾಗಿ ಕಾರ್ಯಕ್ರಮವನ್ನು ನಡೆಸಿದ ಸಾರ್ಥಕತೆಯನ್ನು ಮೆರೆದರು.

'**ಕುಂಭಮೇಳದಲ್ಲಿ ಅದಮ್ಯ ಚೇತನ:** ಪ್ರಯಾಗ್ ರಾಜ್ ನಲ್ಲಿ 144 ವರ್ಷಗಳ ನಂತರ ನಡೆಯುತ್ತಿರುವ ಮಹಾಕುಂಭಮೇಳದಲ್ಲಿ 45 ಕೋಟಿಗೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆಯಿಂದ ಇಷ್ಟೊಂದು ಜನರಿಗೆ ಭೋಜನ ವ್ಯವಸ್ಥೆ ಮಾಡುವ ಸಂದರ್ಭದಲ್ಲಿ ಅಪಾರ ಮಟ್ಟದ ತ್ಯಾಜ್ಯ ಉತ್ಪತ್ತಿಯಾಗುವ ಸಂಭವವಿದೆ. ಈ ನಿಟ್ಟಿನಲ್ಲಿ ಆರ್ಎಸ್ಎಸ್. ಪರಿಸರ ಗತಿ ವಿಧಿಯ ಸದಸ್ಯರು ಅದಮ್ಯ ಚೇತನದ ಪ್ಲೇಟ್ ಬ್ಯಾಂಕ್ ಮಾದರಿಯಲ್ಲಿ 15 ಲಕ್ಷ ಮರುಬಳಕೆ ಸ್ಟೀಲ್ ತಟ್ಟೆಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ಈ ಕುರಿತು ನಡೆದ ತಯಾರಿಗಳಲ್ಲಿ ತೇಜಸ್ವಿನಿ ಅನಂತಕುಮಾರ್ ಅವರು ವೈಯಕ್ತಿಕವಾಗಿ ಭಾಗವಹಿಸಿ, ಮಾರ್ಗದರ್ಶನ ನೀಡಿದರು.





**ಸೇಡಂ:** ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಭಾರತ ವಿಕಾಸ ಸಂಗಮ ಮತ್ತು ವಿಕಾಸ್ ಅಕಾಡೆಮಿ ವತಿಯಿಂದ ಭಾರತೀಯ ಸಂಸ್ಕೃತಿ ಉತ್ಸವ-7 ಮತ್ತು ಸಮಿತಿಯ ಸ್ವರ್ಣ ಜಯಂತಿ ಕಾರ್ಯಕ್ರಮವು ಬರುವ ಜ.28 ರಿಂದ ಫೆ 6 ವರೆಗೆ ಕಲ್ಬುರ್ಗಿ ಜಿಲ್ಲೆಯ ಸೇಡಂ ರಾಜ್ಯ ಹೆದ್ದಾರಿಯ ಬೀರನಹಳ್ಳಿ ಕ್ರಾಸ್ ನ ಪ್ರಕೃತಿ ನಗರದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಹತ್ತು ದಿನಗಳ ಕಾಲ ನಡೆಯುವ ಈ ಬೃಹತ್ ಉತ್ಸವದಲ್ಲಿ ದೇಶದ ವಿವಿಧ ಗಣ್ಯರು ಭಾಗವಹಿಸಲಿದ್ದಾರೆ. 30 ಲಕ್ಷಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ಈ ಬೃಹತ್ ಉತ್ಸವದಲ್ಲಿ ಅದಮ್ಯ ಚೇತನ ಸಂಸ್ಥೆಯ ಹೆಮ್ಮೆಯ "ಪ್ಲೇಟ್ ಬ್ಯಾಂಕ್" ವ್ಯವಸ್ಥೆಯನ್ನು ಬಳಸಲಾಗುತ್ತಿದೆ. ಈ ಉತ್ಸವಕ್ಕೆ ಬರುವ ಲಕ್ಷಾಂತರ ಜನರಿಗೆ ಸ್ಟೀಲ್ ತಟ್ಟೆಗಳಲ್ಲಿ ಊಟವನ್ನು ಕೊಡುವ ವ್ಯವಸ್ಥೆ ಮಾಡಲಾಗುತ್ತಿದೆ. ಅದಮ್ಯ ಚೇತನ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ದಿ. 16 ರಂದು ಸೇಡಂಗೆ ತೆರಳಿ ದಾಸೋಹ ಸಮಿತಿಯ ಸ್ವಯಂಸೇವಕರ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ, ಶೂನ್ಯತಾಜ್ಯ ಪರಿಕಲ್ಪನೆಯ ಬಗ್ಗೆ ಮಾರ್ಗದರ್ಶನ ನೀಡಿದರು.

**ಅನಂತಪಥ**

Inputs: Poornaprazna / ACF / AKP / GM Inamdar/ Gopal T.S / K. Janardhana Thunga / Sanjay R / Trivikram Joshi
Photographs: Gopal TS / Kengeri Chakrapani/ Internet Sources / AKP / ACF/ A. G. Lakshminarayana
Acknowledgements: Poornima Ravishankar
Printed at: Rashtrothana Mudranalaya, Chamarajpet, Bengaluru
Published by: Tejaswini Ananthkumar

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅನಂತ ಚಿತ್ರಸಂಪುಟ

**ಅದಮ್ಯ ಚೇತನ ಸಂಸ್ಥೆಯು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಸೇವಾ ಉತ್ಸವದ ಹಳೆಯ ಆವೃತ್ತಿಗಳ ಚಿತ್ರ ಸಂಪುಟ.**






















## ಅದಮ್ಯ ಸೇವಾ

( ಅದಮ್ಯ ಚೇತನ ಅನಂತ ಸೇವಾ ಉತ್ಸವ 2025 ಚಿತ್ರಸಂಪುಟ )

















